ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಮೆ || ಈಕ್ವೆಸ್ಟೇನ್ ಸೆಂಟರ್ -ವಿರುದ್ಧ-ಮೆ || ಚಾಮುಂಡಿ ಹೋಟೆಲ್ ಪ್ರೈವೇಟ್ ಲಿ.,

ಸಂಕೀರ್ಣ ಮೊದಲ ಅಪೀಲು ಸಂ:2620/2017 (ಎ.ಎ.), ದಿನಾಂಕ 2 ನೇ ಆಗಸ್ಟ್, 2017.

ತೀರ್ಪು

ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:

ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮದ 9 (ಡಿ) ಪ್ರಕರಣದಡಿಯಲ್ಲಿನ ಅಪೀಲಿನ ಮೂಲಕ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿ LXI ನೇ ಹೆಚ್ಚುವರಿ ಸಿವಿಲ್ ಹಾಗೂ ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್ 62) ದ ಕಡತದ ಮೇಲೆ ಎ.ಎ.ಸಂ .196/2016 ರಲ್ಲಿ ಮಾಡಿದ 16.03.2017 ರಂದಿನ ಆದೇಶದ ವಿರುದ್ಧ ಈ ಸಂಕೀರ್ಣ ಮೊದಲ ಅಪೀಲನ್ನು ಅಪೀಲುದಾರ/ಅರ್ಜಿದಾರನು ಸಲ್ಲಿಸಿರುತ್ತಾನೆ.

I-ಪ್ರಕರಣದ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ:

2. ಕಂಪನಿಗಳ ಅಧಿನಿಯಮ 2013 ರ 8 ನೇ ಪ್ರಕರಣದಡಿಯಲ್ಲಿ ನಿಗಮಿತವಾದ ಅಪೀಲುದಾರ ಕಂಪನಿಯು ಲಾಭದಾಯಕವಲ್ಲದ ಕಂಪನಿಯಾಗಿದೆಯೆಂದೂ ಹಾಗೂ ಎಲ್ಲಾ ಕ್ರೀಡೆಗಳನ್ನು ಮೇಲ್ದರ್ಜೆಗೇರಿಸುವ ಹಾಗೂ ಎಲ್ಲಾ ಅಶ್ವಾರೋಹಿ ಚಟುವಟಿಕೆಗಳ ವ್ಯವಹಾರದಲ್ಲಿ ನಿರತವಾಗಿತ್ತದೆಂದು ವಾದಿಸಿ ಅನುಸೂಚಿತ ಸ್ವತ್ತಿಗೆ ಸಿಬ್ಬಂದಿ ವರ್ಗದವರು, ನೌಕರರು, ಸಾರ್ವವರ್ತಿಕ ಸಂದರ್ಶಕರು, ನೀರಿನ ಟ್ಯಾಂಕರ್ಗಳು, ಕುದುರೆಯ ಆ್ಯಂಬುಲೆನ್ಸ್, ಹುಲ್ಲಿನ ಲಾರಿಗಳ ಪ್ರವೇಶ ಹಾಗೂ ನಿರ್ಗಮನವನ್ನು ಅಡ್ಡಿಪಡಿಸುವುದನ್ನು ಕ್ಷೇಮುಮಾಡಿ ಪ್ರತ್ಯರ್ಜಿದಾರ ಅಥವಾ ಅದರ ಅಧಿಕಾರಿಗಳು ಅಥವಾ ಇದರ ನೌಕರರು ಅಥವಾ ಯಾರೇ ಇತರ ವ್ಯಕ್ತಿಗಳನ್ನು ನಿರ್ಬಂದಿಸಿ ತಡೆಯಾಜ್ಞೆ ನೀಡುವುದಕ್ಕೆ ಸಂಬಂಧಿಸಿದಂತೆ ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮದ 9 (ಡಿ) ಪ್ರಕರಣದಡಿಯಲ್ಲಿ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿರುತ್ತಾರೆ.

3. ಕಳೆದ ನಾಲ್ಕು ದಶಕಗಳಿಂದಲೂ ಅಶ್ವಾರೋಹಿ ಕೇಂದ್ರವನ್ನು ನಡೆಸುತ್ತಿದ್ದು, ಅದರಲ್ಲಿ ಕುದುರೆ ಸವಾರಿಯ ತರಬೇತಿ ನೀಡುತ್ತಿದ್ದು, ಸದರಿ ದಾವಾಸ್ವತ್ತಿನಲ್ಲೇ ಇತರೆ ತತ್ಸಂಬಂಧ ಚಟುವಟಿಕೆಗಳನ್ನು ನಿರ್ವಹಿಸಲಾಗುತಿತ್ತು.ಅಲ್ಲದೆ, ಸದರಿ ಸ್ವತ್ತು ಎಲ್ಲಾ ಅಶ್ವಾರೋಹಿ ಕೇಂದ್ರಗಳಲ್ಲಿರುವಂತಹುದೇ ಕುದುರೆ ಲಾಯವನ್ನು ಒಳಗೊಂಡಿದ್ದು, ಪ್ರಸ್ತುತ, ಅಪೀಲುದಾರ ಸಂಸ್ಥೆಯ ಸದರಿ ಲಾಯದಲ್ಲಿ 80 ಕ್ಕಿಂತ ಹೆಚ್ಚು ಕುದುರೆಗಳಿಗೆ ತಾಣವನ್ನು ನೀಡಿತ್ತು.ಅರ್ಜಿದಾರ ಸಂಸ್ಥೆಯು, ಚ ಕಾಲಕಾಲಕ್ಕೆ ಬದಲಾಗಿರುವ ಹಲವಾರು ನಿಬಂಧನೆಗಳಿಗೆ ಸಂಬಂಧಿಸಿದ ಗೇಣಿಯಡಿಯಲ್ಲಿ ಅಶ್ವಾರೋಹಿ ಕೇಂದ್ರವನ್ನು ಆರಂಭಿಸುವುದರಿಂದ ಸದರಿ ಸ್ವತ್ತಿನ ಅಧಿಭೋಗದಲ್ಲಿರುತ್ತದೆ.ಮುಂದುವರೆದು, ಸದರಿ ಒಪ್ಪಂದ ಪತ್ರವನ್ನು ಪರವಾನಿಗೆ ಒಪ್ಪಂದ ಪತ್ರವೆಂದು ಕರೆದಿದ್ದಾಗ್ಯೂ, ಅಪೀಲುದಾರನಿಗೆ ಗೇಣಿ ನೀಡಿದ್ದು ಸದರಿ ಸ್ವತ್ತಿನಡಿಯಲ್ಲಿ ಪ್ರತ್ಯರ್ಜಿದಾರರು ಲಿಖಿತ ಒಪ್ಪಂದ ಪತ್ರವನ್ನು ಪ್ರತ್ಯರ್ಜಿದಾರರು ಬರೆಸಿದ್ದರೆಂದೂ ಹಾಗೂ ಇದರಲ್ಲಿನ ಪರವಾನಿಗೆಯ ಮೂಲಕ ಸದರಿ ಸ್ವತ್ತನ್ನು ನೀಡಲಾಗಿರುತ್ತದೆಂದು ಒಕ್ಕಣೆಯಲ್ಲಿ ಕ್ಷೇಮುಮಾಡಲಾಗಿರುತ್ತದೆಂದು, ಹಾಗೂ ನಿರಂತರವಾಗಿ ಪರವಾನಿಗೆ ಮೊಬಲಗನ್ನು ಸಂದಾಯಮಾಡಿ, ಪ್ರಸ್ತುತ 88,000/ ರೂ.ಗಳ ಮಾಸಿಕ ಬಾಡಿಗೆಯನ್ನು ಸಂದಾಯಮಾಡಲಾಯಿತು.ಮುಂದುವರೆದು ಅನ್ವಯವಾಗುವಂಥ ಸೇವಾ ತೆರಿಗೆಯನ್ನು

ಸಂದಾಯಮಾಡಲಾಗಿರುತ್ತದೆಂದು ವಾದಿಸಲಾಗಿರುತ್ತದೆ.ಪ್ರತ್ಯರ್ಜಿದಾರರು ಹಿಂದಿನ ಒಪ್ಪಂದ ಪತ್ರವನ್ನು ದಿನಾಂಕ 30-1-2015ರಂದು ಪರಸ್ಪರ ಸಮ್ಮತಿಯ ಮೂಲಕ ವಿಸ್ತರಿಸಬಹುದಾದಂಥ 11 ತಿಂಗಳುಗಳ ಅವಧಿಯವರೆಗೆ ಕಾನೂನಿನ ರೂಪಕ್ಕೆ ತರಲಾಗಿರುತ್ತದೆ.

4. ಮುಂದುವರೆದು, ಅಪೀಲುದಾರ ಸಂಸ್ಥೆಯು, ಕುದುರೆಗಳ ಬಗೆಗೆ ನಿಗಾ ವಹಿಸುವ ದೃಷ್ಟಿಯಿಂದ ಸದರಿ ಆವರಣದಲ್ಲಿಯೇ ಇರುವಂಥ ಹಾಗೂ ಕುದುರೆ ಸವಾರಿ ಹಾಗೂ ಇತರೆ ಅಶ್ವಾರೋಹಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತಮ್ಮ ಹೆಸರನ್ನು ನೋಂದಾಯಿಸಿರುವಂಥ ಕುದುರೆ ಸವಾರರು ಹಾಗೂ ಸದಸ್ಯರುಗಳಿಗೆ ತರಬೇತಿ ನೀಡಲು ನಿರತರಾಗಿರುವಂಥ ಹಲವಾರು ತರಬೇತುದಾರರನ್ನು ಉಳಿಸಿಕೊಂಡಿರುತ್ತದೆ.ಅಪೀಲುದಾರ ಕೇಂದ್ರವು, ದೆಹಲಿಯಲ್ಲಿನ ರಾಷ್ಟ್ರೀಯ ಛಾಂಪಿಯನ್ಶಿಪ್ ಅನ್ನು ಒಳಗೊಂಡಂತೆ ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು, ಅಂಥ ಸ್ಪರ್ಧೆಗಳಲ್ಲಿನ ಅವರ ಕಾರ್ಯನಿರ್ವಹಣೆಯು ಅಸಾಧಾರಣವಾದುದಾಗಿರುತ್ತದೆ.

5. ಮುಂದುವರೆದು, ಅಪೀಲುದಾರನಿಗೂ ಕೂಡ ಹೆಚ್ಚುವರಿ ಅಧಿಕಾರದ ಅವಶ್ಯಕತೆಯಿದ್ದು, ತದನುಸಾರವಾಗಿ, ಪ್ರತ್ಯರ್ಜಿದಾರರ ಪೂರ್ವಸಮ್ಮತಿಯೊಂದಿಗೆ, ಇದು ವಿದ್ಯುಚ್ಛಕ್ತಿ ಪೂರೈಕೆಯನ್ನು ಹೆಚ್ಚಿಸಲು ಬೆಸ್ಕಾಂಗೆ ಅನುಮತಿಯನ್ನು ನೀಡಬೇಕೆಂದು ಸಿಆಸುಇ ಇಲಾಖೆಯನ್ನು ಕೋರಿರುತ್ತದೆ.ತದನುಸಾರವಾಗಿ, ಸಿಆಸುಇ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಿ ಬೆಸ್ಕಾಂಗೆ ಹೆಚ್ಚುವರಿ ಅಧಿಕಾರವನ್ನು ನೀಡಿರುತ್ತದೆ.ಅದರಂತೆ ಅಪೀಲುದಾರ ಸಂಸ್ಥೆಯು ಕೆಫೆಟೇರಿಯಾ, ಅಡುಗೆ ಮನೆ, ಊಟದ ಮನೆ ಹಾಗೂ ಕುಳಿತು ವಿಶ್ರಮಿಸಿಕೊಳ್ಳುವ ಸ್ಥಳ, ಶೌಚಾಲಯ ಮುಂತಾದವುಗಳನ್ನು ಆಯೋಜಿಸಲು ಕ್ರಮ ಕೈಗೊಂಡಿರುತ್ತದೆ.ಅಂಥ ಮೂಲಭೂತಸೌಕರ್ಯಗಳಿಗಾಗಿ, ಅಪೀಲುದಾರ ಸಂಸ್ಥೆಯು ಯುಕ್ತವಾಗಿ ಪೂರ್ಣಗೊಳಿಸಿದ ನೆಲಹಾಸು ಹಾಗೂ ಪ್ರತ್ಯೇಕಗೊಳಿಸುವ ಗೋಡೆಗಳೊಂದಿಗೆ ಹಾಗೂ ಮರ ಹಾಗೂ ಇತರೆ ಸಾಮಗ್ರಿಗಳು ಸಮುಚಿತ ಬಳಕೆಯೊಂದಿಗೆ ಮೇಲ್ಛಾವಣಿಗೆ ಡೇರೆ ಬಟ್ಟೆ ಹಾಗೂ ಮೇಲ್ಛಾವಣಿ ಹಾಸುಗಳನ್ನು ಬಳಸಿ ನಿರ್ಮಿಸಿರುತ್ತದೆ.

6. ಮುಂದುವರೆದು, ವಾಸ್ತವಾಂಶಗಳು ಹೀಗಿರುವಾಗ, ಅಪೀಲುದಾರ ಸಂಸ್ಥೆಯು, 1,50,700 ಚದರ ಅಡಿ ಪ್ರದೇಶವನ್ನು ಬಳಸಿಕೊಳ್ಳಲು ಪರವಾನಿಗೆ ಪಡೆದುಕೊಂಡಿದ್ದು, 2,66,119 ಚದರಡಿ ಹೆಚ್ಚುವರಿ ಅಳತೆಯನ್ನು ಕಾನೂನು ಬಾಹಿರವಾಗಿ ಬಳಸಿಕೊಂಡಿರುತ್ತಾರೆಂದು ಆಪಾದಿಸಿ ಪ್ರತ್ಯರ್ಜಿದಾರನು ನೀಡಿರುವ 31.03.2016 ರಂದಿನ ನೋಟೀಸನ್ನು ಸ್ವೀಕರಿಸಿ ತನಗೆ ಆಘಾತವುಂಟಾಯಿತೆಂಬುದು ಸಂಸ್ಥೆ ವಾದಿಸಿರುತ್ತದೆ.ಆದ್ದರಿಂದ, ಪ್ರತ್ಯರ್ಜಿದಾರರು, 02.05.2016 ರಂದು ಅಪೀಲುದಾರ ಸಂಸ್ಥೆ ನೀಡಿದ ಉತ್ತರಕ್ಕೆ, ಪ್ರತ್ಯುತ್ತರವಾಗಿ ಮೂರು ತಿಂಗಳೊಳಗೆ ಸದರಿ ಸ್ವತ್ತನ್ನು ತೆರವುಗೊಳಿಸಿ, ಹಸ್ತಾಂತರಿಸಲು ಅಪೀಲುದಾರರನ್ನು ಸೂಚಿಸಿರುತ್ತಾರೆ.ಸದರಿ ಒಪ್ಪಂದದಲ್ಲಿ ಮಧ್ಯಸ್ಥಿಕೆ ಖಂಡವಿರುವುದರಿಂದ ಒಪ್ಪಂದವನ್ನು ವಜಾಗೊಳಿಸುವುದು ಕಾನೂನು ಬಾಹಿರವೆಂದು ತಾತ್ಪರ್ಯವಾಗುವುದರಿಂದ, ಅಪೀಲುದಾರ ಸಂಸ್ಥೆಯು, ಎ.ಎ.ಸಂ. 196/2016 ನ್ನು ಕೋರಿ ಅರ್ಜಿ ಐ.ಎ. 1 ರೊಂದಿಗೆ ನಿರ್ಬಂಧಕಾಜ್ಞೆಗೆ ಸಂಬಂಧಿಸಿದಂತೆ ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮ, 1996 ರ 9 ನೇ ಪ್ರಕರಣದಡಿಯಲ್ಲಿ ಮಧ್ಯಸ್ಥಿಕೆ ಅರ್ಜಿಯನ್ನು ಸಲ್ಲಿಸಿರುತ್ತದೆ.ಸದರಿ ನ್ಯಾಯಾಲಯವು 04.08.2016 ರಂದು ಸದರಿ ಐ.ಎ.ಐನ್ನು ತಿರಸ್ಕರಿಸಿ, ಇದಕ್ಕೆ ವಿರುದ್ಧವಾಗಿ, ಅಪೀಲುದಾರ ಸಂಸ್ಥೆಯ, ಎಂಎಫ್ಎ ಸಂ .5818/2016 ರಲ್ಲಿ ಈ ನ್ಯಾಯಾಲಯದ ಮುಂದೆ ಒಂದು ಅಪೀಲನ್ನು ಸಲ್ಲಿಸಿದ್ದು, ಇದು ತರುವಾಯ, ಡಬ್ಲ್ಯೂಪಿ.ಸಂ .52717/2016 ಕ್ಕೆ ಪರಿವರ್ತಿಸಲಾಗಿದ್ದು, ಈ ನ್ಯಾಯಾಲಯವು 01.12.2016 ರಂದಿನ ಆದೇಶದ ಮೂಲಕ, ಸುನಾವಣೆಯ ಮುಂದಿನ ದಿನಾಂಕದವರೆಗೆ 3.12.2016 ರಿಂದ 31.12.2016 ರ ನಡುವೆ

ನಡೆಯಬೇಕೆಂಬ ಸಂದರ್ಭದ ಹಿನ್ನಲೆಯಲ್ಲಿ ಒಪ್ಪಂದದ ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾಧೀನ ಹಾಗು ಅಧಿಭೋಗವನ್ನು ಅಡ್ಡಿಪಡಿಸುವುದರಿಂದ ಪ್ರತ್ಯರ್ಜಿದಾರರು ಅಥವಾ ಪ್ರತ್ಯರ್ಜಿದಾರ ಕೈಕೆಳಗೆ ಕಾರ್ಯನಿರ್ವಹಿಸಲು ಯಾರೇ ವ್ಯಕ್ತಿಯನ್ನು ನಿರ್ಬಂಧಿಸಿರುತ್ತದೆ.ತದನುಸಾರವಾಗಿ, ಅಧಿವಿಚಾರಣಾ ನ್ಯಾಯಾಲಯ ಪ್ರಶ್ನೆತ ಆದೇಶವನ್ನು ಹೊರಡಿಸಿರುತ್ತದೆ; ಹಾಗಾಗಿ ಪ್ರಸ್ತುತ ಅಪೀಲನ್ನು ಸಲ್ಲಿಸಲಾಗಿರುತ್ತದೆ.

7. ಪ್ರತ್ಯರ್ಜಿದಾರನು ಅರ್ಜಿಯಲ್ಲಿ ಹೇಳಿರುವ ದೃಢಕ್ತಿಗಳನ್ನು ನಿರಾಕರಿಸಿ ಅರ್ಜಿಗೆ ಆಕ್ಷೇಪಣೆಗಳನ್ನು ಸಲ್ಲಿಸಿದ್ದು ಅಪೀಲುದಾರನು ಸಲ್ಲಿಸಿದ ಅರ್ಜಿಯನ್ನು ಮುಖ್ಯವಾದ ವಾಸ್ತವಾಂಶಗಳನ್ನು ರದ್ದುಪಡಿಸಿರುವುದಕ್ಕೆ ಸಂಬಂಧಿಸಿದಂತೆ ವಜಾಗೊಳಿಸಲು ಬದ್ಧವಾಗಿದ್ದು, ಅಪೀಲುದಾರ ಸಂಸ್ಥೆಯ ಶುದ್ಧ ಹಸ್ತದಿಂದ ನ್ಯಾಯಾಲಯದ ಕದವನ್ನು ಬಡಿದಿರುವುದಿಲ್ಲ.ಮುಂದುವರೆದು, ಅಪೀಲುದಾರ ಸಂಸ್ಥೆಯು 2000 ನೇ ವರ್ಷದಲ್ಲಿ ಸದರಿ ಆವರಣದಲ್ಲಿ ಕುದುರೆ ಸವಾರಿ ಹಾಗೂ ಇತರೆ ಅಶ್ವಾರೋಹಿ ಚಟುವಟಿಕೆಗಳನ್ನು ನಡೆಸಲು ಅನುಮತಿಗಾಗಿ ಪ್ರತ್ಯರ್ಜಿದಾರರರನ್ನು ಸಂಪರ್ಕಿಸಿದ್ದು, ಪ್ರತ್ಯರ್ಜಿದಾರರು ಪರವಾನಿಗೆಯ ರೂಪದಲ್ಲಿ ಅನುಮತಿ ನೀಡಿದ್ದು, ಹಾಗೂ ಎಲ್ಲಾ ಸಮಯದಲ್ಲೂ, ಇಬ್ಬರೂ ಪಕ್ಷಕಾರರು ಪರವಾನಿಗೆ ಹಾಗೂ ಅವರ ನಿಬಂಧನೆಗಳಿಗೆ ಸಂಬಂಧಿಸಿದಂತೆ ಸಮ್ಮತಿಸಿರುತ್ತಾರೆಂದೂ ವಾದಿಸಲಾಗಿರುತ್ತದೆ.ಪರವಾನಿಗೆಯ ಹಿಂದಿನ ಒಪ್ಪಂದವನ್ನು 30.01.2015 ರಂದು ನೀಡಲಾಗಿತ್ತು.ಮುಂದುವರೆದು ಪ್ರತ್ಯರ್ಜಿದಾರರ ಅನುಮತಿಯನ್ನು ಗಮನಿಸದೆ ಅಪೀಲುದಾರನು, ಪರವಾನಿಗೆಯನ್ನು ನೀಡಿದಂಥ 1,50,000 ಚದರಡಿಗೆ ಬದಲಾಗಿ 2,66,119 ಚದರಡಿ ಪ್ರದೇಶದೊಂದಿಗೆ ಸದರಿ ಆವರಣದ ಮೇಲೆ ಪೂರ್ಣಪ್ರಮಾಣದ ನಿರ್ಮಿಕೆಗಳನ್ನು ನಿರ್ಮಾಣಮಾಡಿ ವ್ಯವಹರಣೆಯ ಕಾರ್ಯಾರಂಭ ಮಾಡಿ, ನಿರ್ವಹಿಸಲಾಗುತ್ತಿದೆ.ಮತ್ತು ಮುಂದುವರೆದು, ಒಪ್ಪಂದದ ನಿಬಂಧನೆಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ತತ್ಕ್ಷಣದ ಪರಿಣಾಮದೊಂದಿಗೆ ಪರವಾನಿಗೆಯನ್ನು ವಜಾಗೊಳಿಸಲು 6.4 ನೇ ಖಂಡವಿದ್ದಾಗ್ಯೂ, ಮೂರು ತಿಂಗಳುಗಳ ನೋಟೀಸನ್ನು ನೀಡುವ ಮೂಲಕ 6.1 ಖಂಡದಡಿಯಲ್ಲಿ ಪರವಾನಿಗೆಯನ್ನು ವಜಾಗೊಳಿಸಲು ಪ್ರತ್ಯರ್ಜಿದಾರರು ಆಯ್ಕೆ ಮಾಡಿಕೊಂಡಿರುತ್ತಾರೆ.

8. ಮುಂದುವರೆದು ಭಾರತೀಯ ಅನುಭೋಗಗಳ ಅಧಿನಿಯಮ, 1882 ರ 60 ನೇ ಪ್ರಕರಣದ ಉಪಬಂಧಗಳಡಿ ಪರವಾನಿಗೆ ನೀಡುವುದನ್ನು ರದ್ದುಗೊಳಿಸಲಾಗಿರುತ್ತದೆಂದು ಅಪೀಲುದಾರನಿಗೆ 04.07.2016 ರಂದು ನೋಟೀಸನ್ನು ಆವರಣವನ್ನು ತೆರವುಗೊಳಿಸಬೇಕೆಂದು ಭಾವಿಸಿಕೊಳ್ಳಬೇಕಾಗಿರುತ್ತದೆ ಹಾಗೂ ವಾಸ್ತವಿಕ ಅಂಶಗಳನ್ನು ಮರೆಮಾಚಿ ಎ.ಎ. 196/2016 ನ್ನು ಸಲ್ಲಿಸಲಾಗಿರುತ್ತದೆಂದೂ ಪ್ರತ್ಯರ್ಜಿದಾರರು ವಾದಿಸಿರುತ್ತಾರೆ.ಮುಂದುವರೆದು, ಒಪ್ಪಂದ ಪತ್ರವು ಒಂದು ಪರವಾನಿಗೆಯಾಗಿರುವುದರಿಂದ ಗೇಣಿ ಅಥವಾ ಅನುಭೋಗ ಅಥವಾ ಅನುದಾನದ ನಿಷೇಧವನ್ನು ಸೃಜಿಸುತ್ತದೆಂದು ಪಕ್ಷಕಾರವು ಒಪ್ಪಿಕೊಂಡಿರುತ್ತಾರೆಂಬುದನ್ನು ಒಪ್ಪಂದದ 4.2 ನೇ ಖಂಡವು ದೃಢೀಕರಿಸುತ್ತದೆಂದು ವಾದಿಸಲಾಗಿರುತ್ತದೆ.ಆದ್ದರಿಂದ, ಅರ್ಜಿಯನ್ನು ವಜಾಗೊಳಿಸಲು ಕೋರಲಾಗಿರುತ್ತದೆ.

II – ವಿವಾದಾಂಶಗಳು

9. ಅಧಿವಿಚಾರಣಾ ನ್ಯಾಯಾಲಯವು ದಾವೆಯ ಪಕ್ಷಕಾರರ ಅರ್ಜಿಯನ್ನು ಹಾಗು ಆಕ್ಷೇಪಣೆಯನ್ನು ಪರಿಗಣಿಸಿ ಈ ಮುಂದೆ ಓದಲಾದಂಥ ವಿವಾದಾಂಶಗಳನ್ನು ರೂಪಿಸಲಾಗಿರುತ್ತದೆ:

1. ಅಪೀಲುದಾರರು ಹಾಗೂ ಪ್ರತ್ಯರ್ಜಿದಾರರ ನಡುವಿನ ವ್ಯವಹರಣೆಯು ಗೇಣಿಯೇ ಅಥವಾ ಪರವಾನಿಗೆಯೇ?

2 ಪ್ರತ್ಯರ್ಜಿದಾರರು ದಿನಾಂಕ 30.01.2015 ರ ಒಪ್ಪಂದವನ್ನು ವಜಾಗೊಳಿಸಿರುವುದು ಊರ್ಜಿತವೇ?

3. ಪ್ರತ್ಯರ್ಜಿದಾರನು ಗೇಣಿಯ ಅವಧಿಯ ನವೀಕರಣವನ್ನು ಖಾತರಿಪಡಿಸುವ ಂ ಥ ಮನವಿ ಹಾಗೂ ನಡತೆಯನ್ನು ಹೊಂದಿದ್ದಾನೆಯೇ?

4 ಗೇಣಿ ಅವಧಿಯ ನವೀಕರಣ/ವಿಸ್ತರಣೆಯ ವಾಗ್ದಾನದ ನಿರ್ದಿಷ್ಟ ಕಾರ್ಯನಿರ್ವಹಣೆಯನ್ನು ಕೋರಲು ಅರ್ಜಿದಾರನು ಹಕ್ಕುಳ್ಳವನಾಗಿರುತ್ತಾನೆಯೇ?

10. ದಾಖಲೆ ಮೇಲಿನ ಇಡೀ ಸಾಮಗ್ರಿಗಳನ್ನು ಪರಿಗಣಿಸಿ, ಅಧಿವಿಚಾರಣಾ ನ್ಯಾಯಾಲಯವು, ಅಪೀಲುದಾರ ಹಾಗೂ ಪ್ರತ್ಯರ್ಜಿದಾರರ ನಡುವಿನ ವ್ಯವಹರಣೆಗೆ ಪರವಾನಿಗೆಯಿರುತ್ತದೆಂಬ ಅಂಶವನ್ನು ದಾಖಲಿಸಿರುತ್ತದೆ.ಪ್ರತ್ಯರ್ಜಿದಾರನು ನೀಡಿರುವ 31.03.2016 ರಂದಿನ ಒಪ್ಪಂದ ಪತ್ರವನ್ನು ವಜಾಗೊಳಿಸಿರುವ ನೋಟೀಸು ಕಾನೂನಿಗನುಸಾರವಾಗಿರುತ್ತದೆ ಹಾಗೂ ಅಪೀಲುದಾರನು ಯಾವುದೇ ಪರಿಹಾರ ಅಥವಾ ಪರವಾನಿಗೆಯ ವಿಸ್ತರಣೆಗೆ ಹಕ್ಕುಳ್ಳವನಾಗಿರುವುದಿಲ್ಲ.ತದನುಸಾರವಾಗಿ, 16 ನೇ ಮಾರ್ಚ್ 2017 ರ ಪ್ರಶ್ನಿತ ಆದೇಶದ ಮೂಲಕ ಅರ್ಜಿದಾರ-ಅಪೀಲುದಾರನು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.ಹಾಗಾಗಿ, ಪ್ರಸ್ತುತ ಅಪೀಲನ್ನು ಸಲ್ಲಿಸಲಾಗಿರುತ್ತದೆ.

11. ನಾನು ದಾವೆಯ ಪಕ್ಷಕಾರರ ಪರ ಮಾನ್ಯ ವಕೀಲರುಗಳ ವಾದವನ್ನು ಆಲಿಸಿರುತ್ತೇನೆ.

III – ಪಕ್ಷಕಾರರ ಪರಸ್ಪರ ವಿರುದ್ಧದ ವಾದಗಳು

12. ಅಪೀಲುದಾರ-ಅರ್ಜಿದಾರ ಸಂಸ್ಥೆಯ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಅರವಿಂದ್ ಕಾಮತ್ ರವರು ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮ, 1996 ರ ಪ್ರಕರಣ 9 (ಡಿ) ರಡಿಯಲ್ಲಿ ಅಪೀಲುದಾರನು ಸಲ್ಲಿಸಿದ ಅರ್ಜಿಯನ್ನು ವಜಾಮಾಡಿ ಅಧಿ ವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಪ್ರಶ್ನಿತ ಆದೇಶವು ದೋಷಪೂರ್ಣವಾಗಿದ್ದು, ದಾಖಲೆ ಮೇಲಿನ ವಿಷಯಕ್ಕೆ ವಿರುದ್ಧವಾಗಿರುತ್ತದೆಯೆಂದು ವಾದಿಸಿರುತ್ತಾರೆ.ಮುಂದುವರೆದು ಇವರು ಅಧಿವಿಚಾರಣಾ ನ್ಯಾಯಾಲಯವು, ವಜಾಗೊಳಿಸುವ ಸದರಿ ಪ್ರಶ್ನೆಯ ಮಧ್ಯಸ್ಥಿಕೆ ನ್ಯಾಯಾಧೀಕರಣದ ಪುರವಲೋಕನದೊಳಗೆ ಬರುತ್ತದೆಂದು ಅಭಿಪ್ರಾಯಪಟ್ಟು, ಅಂಥ ನಿರ್ಣಾಯಕ ಪ್ರಶ್ನೆಯ ನಿರ್ಧರಣೆಯನ್ನು ಇತ್ಯರ್ಥಗೊಳಿಸಲು, ಅಧಿವಿಚಾರಣಾ ನ್ಯಾಯಾಲಯವು, ಅಪೀಲುದಾರರು ಕೋರುವ ಮಧ್ಯಂತರ ಪರಿಹಾರದ ರೂಪದಲ್ಲಿ ರಕ್ಷಣೆಯನ್ನು ನೀಡಬೇಕಾಗುತ್ತದೆಂದು ವಾದಿಸಿರುತ್ತಾರೆ.ಪ್ರತ್ಯರ್ಜಿದಾರರೊಂದಿಗೆ ಮಾಡಿಕೊಂಡಿರುವ ಸದರಿ ಒಪ್ಪಂದಪತ್ರವು, ಒಪ್ಪಂದಡಿಯಲ್ಲಿನ ನಿಬಂಧನೆಗಳನ್ನು ವಿಸ್ತರಿಸಲು ಪ್ರತ್ಯರ್ಜಿದಾರರನ್ನು ಆಜ್ಞಾಪಿಸುವಂಥ ಒಡಂಬಡಿಕೆಯನ್ನು ಒಳಗೊಂಡಿರುತ್ತದೆಂದು ಒತ್ತಿ ಹೇಳಿರುತ್ತಾರೆ.ಅಧಿವಿಚಾರಣಾ ನ್ಯಾಯಾಲಯವು, ಅಪೀಲುದಾರ ಸಂಸ್ಥೆಯು ಸಾಕಷ್ಟು ಕಿರಿಯರಿಗೆ ತರಬೇತಿ ನೀಡಿದ್ದು, ಅದರಲ್ಲಿ ಕೆಲವರು, ವರ್ಷದ ಉಳಿದಾವಧಿಯಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಅಶ್ವಾರೋಹಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರೆಂಬುದನ್ನು ಹಾಗೂ ಅಪೀಲುದಾರ ಸಂಸ್ಥೆಯ ಅನುಸೂಚಿತ ಸ್ವತ್ತಿನಲ್ಲಿ 40 ಕ್ಕಿಂತ ಹೆಚ್ಚು ಕುದುರೆಗಳನ್ನು ಹೊಂದಿತ್ತೆಂದೂ ಇದು ನಿರಂತರ ಆರೈಕೆ ಹಾಗೂ ಅವಶ್ಯಕಗಳ ನಿರಂತರ ಪೂರೈಕೆಯನ್ನು ಅಗತ್ಯಪಡಿಸುತ್ತವೆಂಬುದನ್ನು ಅಲಕ್ಷಿಸಿರುತ್ತದೆ.

13. ಮುಂದುವರೆದು, ಅಧಿವಿಚಾರಣಾ ನ್ಯಾಯಾಲಯವು ಅಪೀಲುದಾರನು ಕೇವಲ ಪರವಾನಿಗೆದಾರನೆಂದೂ ಹಾಗೂ ಅಪೀಲುದಾರ ಸಂಸ್ಥೆಯ ಅಧಿಭೋಗವು ನಿರ್ದಿಷ್ಟ ದಿನಾಂಕದವರೆಗೂ ಅನನ್ಯವಾದ ಹಾಗೂ ನಿರ ಂತರವಾದ ಅಧಿಭೋಗವಾಗಿರುತ್ತದೆಂದು ಹಾಗೂ ಕೆಫೆಟೇರಿಯಾ ಹಾಗೂ ಶೌಚಾಲಯಗಳಂಥ ಹೆಚ್ಚುವರಿ ಮೂಲಸೌಕರ್ಯಗಳನ್ನು ಸ್ಥಾಪಿಸಲಾಗಿರುತ್ತದೆಂದೂ ಹಾಗೂ ಇದರ ನೌಕರರು ಸದರಿ ಸ್ವತ್ತಿನಲ್ಲಿ ಕಾಯಂ ಆಗಿ ವಾಸಿಸುತ್ತಿದ್ದರೆಂಬ ವಾಸ್ತವಾಂಶಗಳನ್ನು ಅಲಕ್ಷಿಸಿ ಪ್ರತ್ಯರ್ಜಿದಾರರೊಂದಿಗೆ ಉಳಿದುಕೊಂಡಿರುತ್ತದೆಂಬ ತೀರ್ಮಾನಕ್ಕೆ ಬಂದು ಬಹುದೊಡ್ಡ ದೋಷವನ್ನು ಎಸಗಿರುತ್ತದೆಂದು ವಾದಿಸಿರುತ್ತಾನೆ.ಮುಂದುವರೆದು, ಪಕ್ಷಕಾರರ ನಡುವೆ 30.01.2015 ರಂದು ಆದ ಒಪ್ಪಂದವು ಇದನ್ನು ಭೋಗ್ಯವೆಂದು ಪರಿಗಣಿಸಿದೆಯೇ ಹೊರತು ಪರವಾನಿಗೆಯೆಂದು ಹೇಳುವುದಿಲ್ಲವೆಂದೂ ವಾದಿಸಿರುತ್ತಾರೆ.ಆದ್ದರಿಂದ, ಅಪೀಲುದಾರರು ಆಸ್ತಿ ವರ್ಗಾವಣೆ ಅಧಿನಿಯಮ, 1882 ರ ಉಪಬಂಧಗಳಡಿಯಲ್ಲಿ ಉದ್ದೇಶಿಸಲಾದಂಥ ಕಾರ್ಯವಿಧಾನವನ್ನು ಅನುಸರಿಸದೆ ಪ್ರತ್ಯರ್ಜಿದಾರರು ಅನುಸೂಚಿತ ಸ್ವತ್ತಿನಿಂದ ಅಪೀಲುದಾರನನ್ನು ತೆರವುಗೊಳಿಸುವಂತಿಲ್ಲ.ಆದ್ದರಿಂದ ಪ್ರಸ್ತುತ ಅಪೀಲನ್ನು ಒಪ್ಪಿಕೊಳ್ಳುವ ಮೂಲಕ ಪ್ರಶ್ನಿತ ಆದೇಶವನ್ನು ರದ್ದುಪಡಿಸಲು ಕೋರಿರುತ್ತಾರೆ.

14. ತನ್ನ ವಾದಗಳಿಗೆ ಬೆಂಬಲವಾಗಿ, ಮಾನ್ಯ ವಕೀಲರು, ಇದು ಭೋಗ್ಯದ ಒಪ್ಪಂದ ಪತ್ರವೆಂದು ಸ್ಪಷ್ಟವಾಗಿ ಸೂಚಿಸುತ್ತಿರುವಂಥ ಪಕ್ಷಕಾರರ ನಡುವೆ ಆದಂಥ ಮೆ || ಈಕ್ವೆಸ್ಟೇನ್ ಸೆಂಟರ್ ವಿರುದ್ಧ-ಮೆ| ಚಾಮುಂಡಿ ಹೋಟೆಲ್ ಪ್ರೈವೇಟ್ ಅ., ಒಪ್ಪಂದ ಪತ್ರವನ್ನು ಸಂಪೂರ್ಣವಾಗಿ ಓದುವ ಮಟ್ಟಿಗೆ ಸಿ.ಎಂ. ಭೀಮ -ವಿರುದ್ಧ-ಪಿ.ಎನ್.ರಾಮಚಂದ್ರ ರಾವ್ 1 (2004) 3 ಎಸ್ಸಿಸಿ 595 ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ತೀರ್ಪನ್ನು ಉದಾಹರಿಸಿರುತ್ತಾರೆ.ಪ್ರತ್ಯರ್ಜಿದಾರರ ಅಪೀಲುದಾರರನ್ನು ಹೊರಹಾಕಲು ಸ್ವತ್ತಿನ ವರ್ಗಾವಣೆ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸಬೇಕಾಗಿರುತ್ತದೆಂದೂ ವಾದಿಸಿರುತ್ತಾರೆ.

15. ಮುಂದುವರೆದು, ಕೃಷ್ಣ ರಾವ್ ಮಹಲೆ (ಮೃತರಾಗಿರುತ್ತಾರೆ) ರವರ ಕಾನೂನು ಸಮ್ಮತ ವಾರಸುದಾರರು -ವಿರುದ್ಧ-ಶ್ರೀಮತಿ ಶೋಭಾ ವೆಂಕಟ್ ರಾವ್ ಎಐಆರ್ 1989 ಎಸ್ಸಿ 2097 ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿ, ಚ ಅದರಲ್ಲಿ ಭಾರತೀಯರ ಒತ್ತಾಯದ ಅಧಿಬೋಗ ತೆಗೆದುಕೊಳ್ಳುವುದನ್ನು ಒಪ್ಪಿಕೊಳ್ಳುವುದಿಲ್ಲ ಹಾಗೂ ನ್ಯಾಯಾಲಯದ ಮೂಲಕ ಹಕ್ಕುಳ್ಳವರಾಗಿರುವುದರಿಂದ ಅಂಥ ಸ್ವಾಧೀನವನ್ನು ಪಡೆದುಕೊಳ್ಳಲು ಅವರು ಅಗತ್ಯಪಡಿಸುತ್ತಾರೆಂದು ಅಭಿಪ್ರಾಯಪಡಲಾಗಿರುತ್ತದೆ.ನಿಜವಾದ ಮಾಲೀಕ ಕಾನೂನಿನಡಿಯಲ್ಲಿನ ಪರಿಹಾರಗಳಿಗೆ ಆಶ್ರಯಪಡೆದುಕೊಂಡು ಅತಿಕ್ರಮಣಕಾರರನ್ನು ಹೊರಹಾಕಬೇಕೆಂಬುದನ್ನು ಕಾನೂನು ಅಗತ್ಯಪಡಿಸುತ್ತದೆ.

16. ಮುಂದುವರೆದು, ಮೇ. ಅಣ್ಣಾಮಲೈ ಕ್ಲಬ್ -ವಿರುದ್ಧ-ತಮಿಳು ನಾಡು ಸರ್ಕಾರ ಹಾಗೂ ಇತರರು ಎಐಆರ್ 1997 ಎಸ್ಸಿ 3650 1702 ಪ್ರಕರಣದಲ್ಲಿ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಕಾನೂನಿನ ನಿಯಮಗಳ ಅನುಸರಣೆಯನ್ನು ಪ್ರೋತ್ಸಾಹಿಸಬೇಕು ಹಾಗೂ ಕಾನೂನುಬದ್ಧ ಅಧಿಭೋಗದಲ್ಲಿರಲು ಇಚ್ಛಿಸುವಂಥ ವ್ಯಕ್ತಿಯನ್ನು ಅಧಿಬೋಗವನ್ನು ತಪ್ಪಿಸುವಂಥ ವ್ಯಕ್ತಿಯಿಂದ ತಪ್ಪಿಸಬೇಕು, ಕಾನೂನುಬದ್ಧ ಅಧಿಭೋಗದಲ್ಲಿರಲು ಇಚ್ಛಿಸುವ ವ್ಯಕ್ತಿಯನ್ನು ಅಧಿಭೋಗದಿಂದ ತಪ್ಪಿಸಲು ವ್ಯಕ್ತಿಯನ್ನು ಶಿಕ್ಷಿಸಬೇಕು ತದನುಸಾರವಾಗಿ ಒಂದು ರೀತಿಯನ್ನು ಯುಕ್ತವಾಗಿ ರೂಪಿಸುವುದು ಹಾಗೂ ಅಂಥ ಗುಂಪಿನಲ್ಲಿ ಗುರುತಿಸಿಕೊಳ್ಳುವುದರಿಂದ ಅವನ್ನು ತಡೆಯುವುದು ಹಾಗೂ ಅಂಥ ವ್ಯಕ್ತಿ ನಿರ್ಬಂಧಿಸುವುದು ನಿಸ್ಸಂದೇಹವಾಗಿ, ನಿಜವಾದ ಮಾಲೀಕನು ಬಲಪ್ರಯೋಗದ ಮೂಲಕವಾಗಿಯಾಗಲೀ ಅಥವಾ ಯಾವುದೇ

ಇತರೆ ಕಾನೂನುಬಾಹಿರ ಕ್ರಮಗಳ ಮೂಲಕವಾಗಿಯಾಗಲೀ ತನ್ನ ಅಧಿಭೋಗವನ್ನು ಉಳಿಸಿಕೊಳ್ಳಲು ಹಕ್ಕುಳ್ಳವನಾಗಿದ್ದಾಗ್ಯೂ ಆ ಹಕ್ಕು ಕಾನೂನನ್ನು ತನ್ನ ಕೈಗೆ ತೆಗೆದುಕೊಳ್ಳಲು ಅನುಮತಿಸಲು ಹಾಗೂ ನ್ಯಾಯಿಕ ಅಧಿಭೋಗದಲ್ಲಿರುವ ವ್ಯಕ್ತಿಯನ್ನು ಅಲ್ಲಿನ ಪ್ರವೇಶಕ್ಕೆ ನಿರ್ಬಂಧಿಸಲು ಅಥವಾ ಕಾನೂನಿನ ಸಮರ್ಥನೆಯಿಲ್ಲದೆ ಅಧಿಭೋಗವನ್ನು ಇತ್ಯರ್ಥಪಡಿಸಲು ಆಧಾರವನ್ನು ಒದಗಿಸುವುದಿಲ್ಲ.

17. ಪಾಟೀಲ್ ಎಕ್ಸಿಬಿಟರ್ (ಪ್ರೈ) ಅ. -ವಿರುದ್ಧ-ಬೆಂಗಳೂರು ನಗರ ಮಹಾನಗರ ಪಾಲಿಕೆ ಎಐಆರ್ 1986 ಕೆಎಎನ್ಟಿ 194 (ಡಿಬಿ) ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪನ್ನು ಉದಾಹರಿಸಿದ್ದು, ಅದರಲ್ಲಿ ನ್ಯಾಯಿಕ ಅಧಿಭೋಗವನ್ನು ಹೊಂದಿರುವಂಥ ವ್ಯಕ್ತಿಯನ್ನು ಒತ್ತಾಯಪಡಿಸುವಂತಿಲ್ಲ ಹಾಗೂ ಭೂಮಾಲೀಕರು, ಅನ್ಯಥಾ ಕಾನೂನಿಗನುಸಾರವಾಗಿಲ್ಲದ ಒತ್ತಾಯ ಪೂರ್ವಕ ತೆರವುಗೊಳಿಸುವಿಕೆಯ ಉದ್ದೇಶವಾಗಿದ್ದು ಕೊಂಡಿರುವ ದಮನಕಾರಿ ಕೃತ್ಯಗಳನ್ನು ತೆರವುಗೊಳಿಸುವುದರಿಂದ ನಿರ್ಬಂಧಿಸಬಹುದಾಗಿರುತ್ತದೆಂದು ಅಭಿಪ್ರಾಯ ಪಡಲಾಗಿರುತ್ತದೆ.

18. ಇದಕ್ಕೆ ಪ್ರತಿಯಾಗಿ, ಪ್ರತ್ಯರ್ಜಿದಾರರ ಪರ ಮಾನ್ಯ ಹಿರಿಯ ವಕೀಲರಾದ ಶ್ರೀ ಆದಿತ್ಯ ಹೊಂದಿಯವರು ನ್ಯಾಯಾಲಯಕ್ಕೆ ಶುದ್ಧಹಸ್ತರಾಗಿ ಬಂದಿರುವುದಿಲ್ಲ ಹಾಗೂ ಇವರು ಪ್ರಕರಣದ ಪ್ರಮುಖ ವಾಸ್ತವಾಂಶಗಳನ್ನು ಬಚ್ಚಿಟ್ಟಿರುತ್ತಾರೆಂದೂ ವಾದಿಸಿ, ಪ್ರಶ್ನಿತ ಆದೇಶವನ್ನು ಸಮರ್ಥಿಸಲು ಕೋರಿರುತ್ತಾರೆ.ಮುಂದುವರೆದು, ಇಡೀ ಸ್ವತ್ತಿನ ಪರವಾನಿಗೆದಾರನಾಗಿ ಅಪೀಲುದಾರನು ಮುಂದುವರೆದಿದ್ದಾಗ್ಯೂ, ದಾವಾ ಅನುಸೂಚಿತ ಸ್ವತ್ತಿನ ನಿಯಂತ್ರಣವನ್ನು ಪ್ರತ್ಯರ್ಜಿದಾರನೊಂದಿಗೇ ಇರುತ್ತದೆಂದು ವಾದಿಸಿರುತ್ತಾರೆ.ಇಡೀ ದಸ್ತಾವೇಜನ್ನು ಓದುವ ಮೂಲಕ ಇದು ಪರವಾನಿಗೆಯೆಂದೂ, ಇದು ಗೇಣಿಯಲ್ಲವೆಂದೂ ವಾದಿಸಿರುತ್ತಾರೆ.ಇವರು ನಿರ್ದಿಷ್ಟವಾಗಿ ಪಕ್ಷಕಾರರ ನಡುವೆ ನಮೂದಾದ ದಿನಾಂಕ 30.01.2015 ರ ಒಪ್ಪಂದದ 4.2 ನೇ ಖಂಡದ ಕಡೆಗಿನ ನ್ಯಾಯಾಲಯದ ಗಮನವನ್ನು ಸೆಳೆದಿರುತ್ತಾರೆ.ಒಮ್ಮೆ ಇದು ಪರವಾನಿಗೆ ಭೋಗ್ಯದ ಅವಧಿ ತೀರಿದೊಡನೆ ದಾವಾ ಅನುಸೂಚಿತ ಸ್ವತ್ತನ್ನು ಅಪೀಲುದಾರರು ತೆರವುಗೊಳಿಸಬೇಕಾಗುತ್ತದೆ.

19. ಮುಂದುವರೆದು, ಸದರಿ ಅಪೀಲುದಾರನು XLIV ನೇ ಹೆಚ್ಚುವರಿ ನಗರ ಸಿವಿಲ್ ಹಾಗೂ ಸತ್ರ ನ್ಯಾಯಾಧೀಶರು, ಬೆಂಗಳೂರು ಇವರ ಮುಂದೆ ಒ.ಎಸ್.ಸಂ .2306/2017 ನ್ನು ಸಲ್ಲಿಸಿದ್ದು, 19 ಹಾಗೂ 20 ನೇ ಪ್ಯಾರಾಗಳಲ್ಲಿನ ವಾದಪತ್ರದಲ್ಲಿ, ಅಪೀಲುದಾರನು ಕಾನೂನಿನ ನ್ಯಾಯಾಲಯವು ಅಡ್ಡಿಪಡಿಸುವುದರಿಂದ ಪ್ರತಿವಾದಿಯನ್ನು ನಿರ್ಬಂಧಿಸಲು ಕಾನೂನು ಪರಿಹಾರವನನು ಕೋರಲು ನ್ಯಾಯವಾದಿಗಳೊಂದಿಗೆ ಸಮಾಲೋಚಿಸಿರುತ್ತಾರೆಂದು ಹೇಳಿರುತ್ತಾರೆ ಹಾಗೂ ವಾದಿಯ ವಕೀಲರು, ಪ್ರತಿವಾದಿಗಳು ಅಥವಾ ಅವರ ಏಜೆಂಟರುಗಳನ್ನು ನಿರ್ಬಂಧಿಸಲು ಹೆಚ್ಚುವರಿ ನಗರ ಸಿವಿಲ್ ಹಾಗೂ ಸತ್ರ ನ್ಯಾಯಾಲಯದ ನ್ಯಾಯಾಧೀಶರು, ಬೆಂಗಳೂರು ಇವರಿಗೆ ಎ.ಎ.ಸಂ .196/2016 ಮಧ್ಯಸ್ಥಿಕೆ ಅರ್ಜಿಯನ್ನು ಹಾಗೂ ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮ, 1996 ರ 9 (ಡಿ) ಪ್ರಕರಣದಡಿಯಲ್ಲಿ ಮಧ್ಯಕಾಲೀನ ಅರ್ಜಿಯನ್ನು ಸಲ್ಲಿಸಿರುತ್ತಾರೆ ಹಾಗೂ ಇದನ್ನು ಅಧಿವಿಚಾರಣಾ ನ್ಯಾಯಾಲಯವು 04.08.2016 ರಂದು ವಜಾಮಾಡಿರುತ್ತದೆ.ತರುವಾಯ ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಂ .527171/2016 ನ್ನು ಸಲ್ಲಿಸಿದ್ದು, ವಾದಿಯ ದಾವಾ ಅನುಸೂಚಿತ ಸ್ವತ್ತಿಗೆ ಮಧ್ಯಪ್ರವೇಶಿಸದಂತೆ ಪ್ರತಿವಾದಿಯನ್ನು ನಿರ್ಬಂಧಿಸಿ ಮಧ್ಯಕಾಲೀನ ಆದೇಶವನ್ನು ಹೊರಡಿಸಿರುತ್ತಾರೆ.ಮುಂದುವರೆದು, ಮಧ್ಯಸ್ಥಿಕೆ ಅರ್ಜಿಯನ್ನು 16.03.2017 ರಂದು ವಜಾಮಾಡಲಾಗಿರುತ್ತದೆಂದೂ, ವಾದಿಗಳ ವಕೀಲರು ಸೂಕ್ತ ಪರಿಹಾರವನ್ನು ಕೋರಲು ಯುಕ್ತವಾದ

ಕಾನೂನುಬದ್‌ಧ ವೇದಿಕೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಬದಲಾಗಿ ಪ್ರತಿವಾದಿಗಳ ವಿರುದ್ಧ ನಿರ್ಬ ಂ ಧಕಾಜ್ಞೆಯನ್ನು ಪಡೆಯಲಾಗದ ಂ ಥ ತಪ್ಪು ದಾರಿಯನ್ನು ಅಳವಡಿಸಿಕೊಂಡಿರುತ್ತಾರೆಂದೂ ಹೇಳಿರುತ್ತಾರೆ.ಆದಾಗ್ಯೂ, ತಪ್ಪು ವೇದಿಕೆಯ ಆಯ್ಕೆಯು ಕಾನೂನುಬದ್ಧ ಅಧಿಭೋಗದ ಸಂರಕ್ಷಣೆ ಕುರಿತ ನಿರ್ಬಂಧಕಾಜ್ಞೆಗೆ ಸಂಬಂಧಿಸಿದ ಯುಕ್ತ ದಾವೆಯನ್ನು ಸಲ್ಲಿಸಲು ಯಾವುದೇ ನಿಷೇಧವನ್ನು ಹೊಂದಿರುವುದಿಲ್ಲ. ತರುವಾಯ, ವಾದಿಗಳು ಎಂಎಫ್ ಸಂ. 2620/2017 ರಲ್ಲಿ ಹೊರಡಿಸಿದ 30.03.2017 ರಂದಿನ ಆದೇಶದ ಬಲದಿಂದ 05.04.2017 ರ ಮೆಮೊವನ್ನು ಸಲ್ಲಿಸಲಾಗಿದ್ದು ಸದರಿ ದಾವೆ ನಿರರ್ಥಕವಾಗಿರುತ್ತದೆ.ಹಾಗಾಗಿ, ಇದನ್ನು ಹಿಂದಕ್ಕೆ ತೆಗೆದುಕೊಂಡಿರುವಂತೆ ವಜಾಗೊಳಿಸಬೇಕಾಗಿರುತ್ತದೆ.ತದನುಸಾರವಾಗಿ, ಸದರಿ ದಾವೆಯ (ಒ.ಎಸ್.ಸಂ .2306/2017) ಹಿಂದಕ್ಕೆ ಪಡೆದುಕೊಂಡಿರುವಂತೆ ವಜಾಗೊಳಿಸಬೇಕಾಗಿರುತ್ತದೆ.ಆದ್ದರಿಂದ, ಪ್ರತ್ಯರ್ಜಿದಾರರ ಪರ ಮಾನ್ಯ ಹಿರಿಯ ವಕೀಲರು ಪ್ರಸ್ತುತ ಅಪೀಲನ್ನು ವಜಾಗೊಳಿಸಲು ಕೋರಲಾಗಿರುತ್ತದೆ.

20. ಇವರ ವಾದಗಳಿಗೆ ಪೂರಕವಾಗಿ, ಪತ್ಯರ್ಜಿದಾರರ ಪರ ಮಾನ್ಯ ವಕೀಲರು ಡೆಲ್ಟಾ ಇಂಟರ್ನ್ಯಾಷನಲ್ ಅ. -ವಿರುದ್ಧ-ಶ್ಯಾಮ್ ಸುಂದರ್ ಗನೇರಿವಾಲ ಹಾಗೂ ಮತ್ತೊಬ್ಬರು ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿರುತ್ತಾರೆ.ಅದರಲ್ಲಿ, ಪಕ್ಷಕಾರರ ಉದ್ದೇಶವು ಒಪ್ಪಂದ ಪತ್ರದ ಪದಾವಳಿಗಳು ಅಸ್ಪಷ್ಟವಿರುವಲ್ಲಿ ಅಥವಾ ದ್ವಂದ್ವಾರ್ಥವನ್ನು ಹೊಂದಿರುವ ಎಂಬ ಅರ್ಥ ಬರುವಂಥೆ ಬಳಸಿರುವುದಾಗಿದ್ದು ಇದರಲ್ಲಿ ಕಾನೂನು ಬದ್ಧವಾಗಿರುವಂಥದನ್ನು ಸಲ್ಲಿಸಿರಬೇಕೆಂದು ಅಭಿಪ್ರಾಯಪಟ್ಟಿರುತ್ತದೆ.

21. ಮುಂದುವರೆದು, ಭೋಗ್ಯ ಹಾಗೂ ಪರವಾನಿಗೆಯ ಅರ್ಥವಿವರಣೆಗೆ ಸಂಬಂಧಿಸಿದಂತೆ ಹೈದರಬಾದ್ ಮೆಟ್ರೊಪಾಲಿಟನ್ ಡೆವೆಲಪ್ಮೆಂಟ್ ಅಥಾರಿಟಿ ಹಾಗೂ ಇತರರು ವಿರುದ್ಧ ಹೋಟೆಲ್ ಮಲ್ಲಿಗಿ ಪ್ರೈ.ಅ. 6 ಈ* ಪ್ರಕರಣದಲ್ಲಿ ಆಂಧ್ರ ಪ್ರದೇಶದ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಉದಾಹರಿಸಿರುತ್ತಾರೆ.

22. ಪರವಾನಿಗೆಯನ್ನು ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು, ಜಿ. ರಾಜ ವಿರುದ್ಧ ಕರ್ನಾಟಕ ಸರ್ಕಾರ ಹಾಗೂ ಇತರರು ರಿಟ್ ಅರ್ಜಿ ಸಂ:2581/2015 ಹಾಗೂ 3740/2015 V-ಪರಿಗಣನೆ ಪ್ರಕರಣದಲ್ಲಿ ಈ ನ್ಯಾಯಾಲಯವು ಹೊರಡಿಸಿದದಿನಾಂಕ: 01.06.2015 ರ ಆದೇಶ ಕುರಿತು ಅದನ್ನು ಅನುಕರಿಸಲು ಕೋರಲಾಗಿರುತ್ತದೆ.

IV-ನಿರ್ಧರಣೆಗೆ ಸಂಬಂಧಿಸಿದ ಅಂಶಗಳು

23. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದ ಪರಸ್ಪರ ವಿರುದ್ಧವಾದ ವಾದಗಳ ಹಿನ್ನಲೆಯಲ್ಲಿ, ಪ್ರಸ್ತುತ ಅಪೀಲಿನಲ್ಲಿ ಪರಿಗಣನೆಗಾಗಿ ಉದ್ಭವಿಸಿದ ವಾಸ್ತವಾಂಶಗಳು ಈ ಮುಂದಿನಂತಿರುತ್ತವೆ:

1) 2015 ರ ಜನವರಿ 30 ರಂದಿನ ಪರವಾನಿಗೆ ಒಪ್ಪಂದವು ಸ್ವತ್ತು ವರ್ಗಾವಣೆ ಅಧಿನಿಯಮ, 1882 ರ 105 ನೇ ಪ್ರಕರಣದಡಿಯಲ್ಲಿ ಉದ್ದೇಶಿಸಲಾದ ಭೋಗ್ಯವೇ ಅಥವಾ ಭಾರತೀಯ ಅಧಿಭೋಗ ಅಧಿನಿಯಮ, 1882 ರ ಉಪಬಂಧಗಳಡಿಯಲ್ಲಿನ ಪರವಾನಿಗೆಯೇ?

1) ಅಧಿವಿಚಾರಣಾ ನ್ಯಾಯಾಲಯವು, ಮಧ್ಯಸ್ಥಿಕೆ ಹಾಗೂ ಸಂದಾಯ ಅಧಿನಿಯಮದ 9 (ಡಿ) ಪ್ರಕರಣದ ಉಪಬಂಧಗಳಡಿಯಲ್ಲಿ ಅಪೀಲುದಾರರು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿರುವುದು ಸಮರ್ಥನೀಯವೇ?

24. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ಪ್ರಜ್ಞಾಪೂರ್ವಕವಾಗಿ ಆಲಿಸಿ, ಲಭ್ಯವಾದ ಸಂಪೂರ್ಣ ದಾಖಲೆಯನ್ನು ಎಚ್ಚರಿಕೆಯಿಂದ ಪರಿಶೀಲಿಸಿರುತ್ತೇನೆ.

25. ಪ್ರತ್ಯರ್ಜಿದಾರನು ಮಧ್ಯಸ್ಥಿಕೆ ಅಪೀಲು ಸಂಖ್ಯೆ 196/2016 ರ ಅನುಸೂಚಿಯಲ್ಲಿ ವಿಷಧವಾಗಿ ವಿವರಿಸಿದ ದಾವಾ ಅನುಸೂಚಿತ ಸ್ವತ್ತಿನ ಮಾಲೀಕನಾಗಿರುತ್ತಾನೆಂಬುದು ವಿವಾದಾತೀತ ಅಂಶವಾಗಿದೆ.ದಾವಾ ಅನುಸೂಚಿತ ಸ್ವತ್ತನ್ನು 88,000/- ರೂ.ಗಳ ಮಾಸಿಕ ಬಾಡಿಗೆ ಆಧಾರದಲ್ಲಿ ಪ್ರಸ್ತುತ ಅಪೀಲುದಾರನಿಗೆ ಪರವಾನಿಗೆ ಮೇಲೆ ನೀಡಲಾಗಿತ್ತೆಂದು ಹಾಗೂ ಪರವಾನಿಗೆಯನ್ನು ಕಾಲಕಾಲಕ್ಕೆ ವಿಸ್ತರಿಸಲಾಯಿತೇಂದು ಹಾಗೂ ಕಳೆದ ಪರವಾನಿಗೆ ಒಪ್ಪಂದವನ್ನು ಪಕ್ಷಕಾರರ ನಡುವೆ 11 ತಿಂಗಳುಗಳ ಅವಧಿಗೆ 30.01.2015 ರಂದು ಮಾಡಿಕೊಳ್ಳಲಾಯಿತೆಂದು ಪರವಾನಿಗೆಯ ಈ ಅವಧಿಯು ತೀರಿದ್ದು, ಪ್ರಸ್ತುತ ಅಪೀಲುದಾರನು ನಿಬಂಧನೆ ಹಾಗೂ ಷರತ್ತುಗಳನ್ನು ಉಲ್ಲಂಘಿಸಿರುತ್ತಾನೆ.ಆದ್ದರಿಂದ, ಲೈಸನ್ಸ್ನ್ನು ವಜಾಮಾಡಿ ಕಾನೂನಾತ್ಮಕ ನೋಟೀಸನ್ನು ಹೊರಡಿಸಿ, ಭಾರತೀಯ ಅನುಭೋಗಗಳ ಅಧಿನಿಯಮ, 1882 ರ 60 ನೇ ಪ್ರಕರಣದ ಉಪಬಂಧಗಳಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಿ ಲೈಸೆನ್ಸ್ ನೀಡಿಕೆಯನ್ನು ತೆರವುಗೊಳಿಸಲಾಗಿರುತ್ತದೆಂಬುದು ಪ್ರತ್ಯರ್ಜಿದಾರನ ವಾದವವಾಗಿರುತ್ತದೆ.

26. ಪ್ರಸ್ತುತ ಅಪೀಲುದಾರನು ತಾನು ಕಳೆದ ನಾಲ್ಕು ದಶಕಗಳಿಂದ ಅಶ್ವಾರೋಹಿ ಕೇಂದ್ರುವನ್ನು ನಡೆಸುತ್ತಿದ್ದ, ಅಶ್ವಾರೋಹಿ ಕೇಂದ್ರುವು ಸ್ಥಾಪಿತವಾಗಿರುವ ಎಲ್ಲೆಡೆ ಕುದುರೆ ಲಾಯಗಳಿರುವಂತೆ ಹಾಗೂ ಕುದುರೆಗಳ ಪ್ರತ್ಯೇಕ ಕೊಠಡಿಗಳಿರುವಂತೆ ಕುದುರೆ ಲಾಯವನ್ನು ಒಳಗೊಂಡಂತೆ ಸದರಿ ಸ್ವತ್ತಿನಲ್ಲಿ ಕುದುರೆ ಸವಾರಿ ಹಾಗೂ ಇತರೆ ತತ್ಸಂಬಂಧ ಚಟುವಟಿಕೆಗಳ ತರಬೇತಿಯನ್ನು ನೀಡಲಾಗುತ್ತಿದೆಯೆಂದು ವಾದಿಸಿರುತ್ತಾನೆ.ಅಪೀಲುದಾರನು ಕಾಲಕಾಲಕ್ಕೆ ಬದಲಾಗುವ ನಿಯಮ ಹಾಗೂ ನಿಬಂಧನೆಗಳಿಗೆ ಸಂಬಂಧಿಸಿದಂಥ ಭೋಗ್ಯದಡಿಯಲ್ಲಿ ಅಶ್ವಾರೋಹಿ ಕೇಂದ್ರುವನ್ನು ಆರಂಭಿಸಿರುವುದರಿಂದ ಸದರಿ ಸ್ವತ್ತಿನ ಅಧಿಭೋಗದಲ್ಲಿದ್ದು ಕಳೆದ ಒಪ್ಪಂದವನ್ನು ದಿನಾಂಕ 30.01.2015 ರಂದು ಪರವಾನಿಗೆ ಒಪ್ಪಂದವೆಂಬ ಶೀರ್ಷಿಕೆಯಡಿ ಪಕ್ಷಕಾರರ ನಡುವೆ ಮಾಡಿಕೊಂಡಿದ್ದು, ದಾವಾ ಸ್ವತ್ತನ್ನು ಪರವಾನಿಗೆಯ ರೂಪದಲ್ಲಿ 90 ಮೆ/ ಈಕ್ವೆಸ್ಟ್ರೇನ್ ಸೆಂಟರ್ -ವಿರುದ್ಧ ಮ II ಚಾಮುಂಡಿ ಹೋಟೆಲ್ ಪ್ರೈವೇಟ್ ಲಿ., ನೀಡಲಾಗಿದೆಯಾದರೂ ಅಪೀಲುದಾರನು ಅನನ್ಯವಾದ ಅಧಿಭೋಗದಲ್ಲಿದ್ದು, ನಿರಂತರವಾಗಿ ಹಾಗೂ ಪ್ರಸ್ತುತ ಪ್ರತೀ ತಿಂಗಳು 88,000/- ರೂ.ಗಳ ಮಾಸಿಕ ಪರವಾನಿಗೆ ಶುಲ್ಕವನ್ನು ಸಂದಾಯಮಾಡುತ್ತಿರಬೇಕೆಂಬ ಒಕ್ಕಣೆಯಿರುತ್ತದೆ.ಇದು ಭೋಗ್ಯ ಹಾಗೂ ಇದು ಪರವಾನಿಗೆಯಲ್ಲ ಹಾಗೂ ಅಪೀಲುದಾರನ ವಿದ್ಯುತ್ ಪೂರೈಕೆಯನ್ನು ಹೆಚ್ಚಿಸಲು ಡಿಎಪಿಆರ್ ಇಲಾಖೆ ಹಾಗೂ ಬೆಸ್ಕಾಂನ ಇಲಾಖೆಯಿಂದ ಅನುಮತಿಯನ್ನು ಪಡೆಯಬೇಕಾಗಿರುತ್ತದೆ.ತದನುಸಾರವಾಗಿ, ಎರಡೂ ಪ್ರಾಧಿಕಾರಗಳು ಅನುಮತಿ ನೀಡಿದ್ದು ಅಪೀಲುದಾರನು ಕೆಫೆಟೇರಿಯಾ, ಅಡುಗೆಮನೆ, ಊಟದ ಮನೆ ಹಾಗೂ ಕುಳಿತುಕೊಳ್ಳುವ ಜಾಗ, ಶೌಚಾಲಯ ಮುಂತಾದವುಗಳನ್ನು ರೂಪಿಸಲು ಕ್ರಮ ತೆಗೆದುಕೊಂಡಿರುತ್ತಾನೆ.ಆದ್ದರಿಂದ ಅಪೀಲುದಾರರು ಇಬ್ಬರು ಪಕ್ಷಕಾರರ ನಡುವೆ ಮಾಡಿಕೊಂಡಿರುವ ದಸ್ತಾವೇಜು ಭೋಗ್ಯವೇ ಹೊರತು ಪರವಾನಿಗೆಯಲ್ಲವೆಂದು ವಾದಿಸಿರುತ್ತಾನೆ.

27. ಮೇಲೆ ಹೇಳಿದ ವಾದಗಳು/ಪ್ರತಿ ವಾದಗಳ ಹಿನ್ನಲೆಯಲ್ಲಿ, 2015 ರ ಜನವರಿ 30 ರಂದಿನ ಪರವಾನಿಗೆಯ ಒಪ್ಪಂದದಂತೆ ಪಕ್ಷಕಾರರ ನಡುವೆ ಮಾಡಿಕೊಂಡ ಒಪ್ಪಂದವನ್ನು ಓದುವುದು ಉಚಿತವಾದುದಾಗಿರುತ್ತದೆ.ಅದರಲ್ಲಿ ಪಕ್ಷಕಾರರ ನಡುವಿನ ದಸ್ತಾವೇಜುಗಳ ಒಡಂಬಡಿಕೆಗಳು ಇದು ಪರವಾನಿಗೆಯೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.ಒಪ್ಪಂದ ಪತ್ರದ ಸೂಕ್ತ ಪದಾವಳಿಗಳು/ ಖ ಂ ಡಗಳು ಈ ಮುಂದಿನಂತಿವೆ:

" ಖಂಡ 1.1:ಲೈಸೆನ್ಸ್ ಕೊಡುವವ, ಲೈಸೆನ್ಸುದಾರನಿಗೆ ಈ ಲೈಸೆನ್ಸ್ನ ಅವಧಿ ಮುಂದುವರೆಯುವ ಎಲ್ಲಾ ಸಮಯದಲ್ಲೂ, ಕುದುರೆ ಸವಾರಿ, ಅಶ್ವಾರೋಹಿ ಕ್ರೀಡೆಗಳು ಹಾಗೂ ಕುದುರೆ ಸವಾರಿಗೆ ಸಂಬಂಧಪಟ್ಟ ಇತರೆ ಕ್ರೀಡೆಗಳನ್ನು ನಡೆಸಲು ಹಾಗೂ ಇದರ ಸದಸ್ಯರಿಗೆ ಕ್ಲಬ್-ಹೌಸನ್ನು ನಿರ್ವಹಿಸಲು ಲೈಸೆನ್ಸ್ ನೀಡಿರುತ್ತದೆ ಹಾಗೂ ಅಧಿಕಾರ ನೀಡಿರುತ್ತದೆ;

ಖಂಡ 1.2:ಈ ಲೈಸೆನ್ಸ್ ಪಕ್ಷಕಾರರ ನಡುವಿನ ಪರಸ್ಪರ ಸಮ್ಮತಿಯ ಮೂಲಕ ವಿಸ್ತರಿಸಬಹುದಾದ ಹಾಗೂ ನವೀಕರಿಸಬಹುದಾದಂಥ 11 ತಿಂಗಳುಗಳ ಅವಧಿಯವರೆಗೂ ಇರುತ್ತದೆ.

ಖಂಡ 4.2:ಇಲ್ಲಿನ ಪಕ್ಷಕಾರರು, ಒಪ್ಪ ಂ ದದ ಅಡಿಯಲ್ಲಿ ಲೈಸೆನ್ಸುದಾರನಿಗೆ ಲೈಸೆನ್ಸುಕೊಡುವವನು ನೀಡಿದ ಹಕ್ಕು ಎಂದರೆ ಭಾರತೀಯ ಅನುಭೋಗಗಳ ಅಧಿನಿಯಮದ 52 ನೇ ಪ್ರಕರಣದ ನಿಬಂಧನೆಗಳಲ್ಲಿ ಐತೀರ್ಪುನೀಡಿದ ಲೈಸೆನ್ಸಾಗಿರುತ್ತದೆ.ಹಾಗೂ ಅದು ಭೋಗ್ಯ ಅಥವಾ ಅನುಭೋಗದ ಅಥವಾ ಅನುದಾನ ವಾಗಬೇಕೆ ಂ ಬ ತಾತ್ಪರ್ಯವನ್ನು ಹೊದಿರುವುದಿಲ್ಲವೆ ಂ ದು ಒಪ್ಪಿಕೊಂಡು, ಒಡಂಬಡಿಕೆ ಮಾಡಿಕೊಂಡಿರುತ್ತಾರೆ.ಲೈಸೆನ್ಸನ್ನು ಯಾರೇ ಇತರ ವ್ಯಕ್ತಿ ಅಥವಾ ಪಕ್ಷಕಾರನ ಪರವಾಗಿ ಲೈಸೆನ್ಸುದಾರನು ವಹಿಸಿಕೊಡಬಹುದಾಗಿರುವುದಿಲ್ಲ ಅಥವಾ ಉಪಗೇಣಿ ಅಥವ ಉಪ-ಲೈಸೆನ್ಸ್ ಕೊಡಬಹುದಾಗಿರುವುದಿಲ್ಲ.

ಖಂಡ 4.5:ಲೈಸೆನ್ಸುದಾರನು, ಅನುಸೂಚಿತ ಆವರಣದಲ್ಲಿ ಅಥವಾ ಸುತ್ತಮುತ್ತ ಕಾಯಂ ಆದ ಯಾವುದೇ ಕಾರ್ಯ ನಿರ್ವಹಿಸಲು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲವೆಂಬುದನ್ನು ವ್ಯಕ್ತವಾಗಿ ದೃಢೀಕರಿಸಿರುತ್ತಾನೆ ಹಾಗೂ ಒಡಂಬಡಿಕೆ ಮಾಡಿಕೊಂಡಿರುತ್ತಾನೆ.

ಖಂಡ 4.7:ಲೈಸನ್ಸುದಾರನು ಸ್ವಚ್ಛವಾದ ಹಾಗೂ ಯುಕ್ತವಾದ ಸ್ಥಿತಿಯಲ್ಲಿ ಅನುಸೂಚಿತ ಆವರಣವನ್ನು ಬಳಸಿಕೊಳ್ಳಬೇಕು ಹಾಗೂ ನಿರ್ವಹಿಸಬೇಕು.

ಖಂಡ 5.1:ಲೈಸನ್ಸುದಾರನು, ಪರವಾನಿಗೆ ಹಾಗೂ ವಿಲ್ಲ ಅವಧಿಗೆ ಸಂಬಂಧಪಟ್ಟಂತೆ ಸದರಿ ಅನುಸೂಚಿತ ಆವರಣದ ಮೆ/ ಈಕ್ವೆಸ್ಟೇನ್ ಸೆಂಟರ್ -ವಿರುದ್ಧ ಮ ll ಚಾಮುಂಡಿ ಹೋಟೆಲ್ ಪ್ರೈವೇಟ್ ಲಿ., ಬಳಕೆ ಹಾಗೂ ಅಧಿಭೋಗದಲ್ಲಿ, ಸದರಿ ಅನುಸೂಚಿತ ಆವರಣವನ್ನು ಒಪ್ಪಿಸಿದ ಮೇಲೆ, ಅವರಿಗೆ ಸಂಬಂಧಪಟ್ಟ ಎಲ್ಲಾ ವಸ್ತುಗಳು ಹಾಗೂ ಅಳವಡಿಕೆಗಳನ್ನು ತೆಗೆಯಲು ಅನುಮತಿಸಬೇಕು.2)

28. ಪಕ್ಷಕಾರರ ನಡುವೆ ನಮೂದಾದ ದಸ್ತಾವೇಜುಗಳನ್ನು ಸಂಪೂರ್ಣವಾಗಿ ಓದಿದಾಗ, ಇದು ಪರವಾನಿಗೆಯ ಒಪ್ಪಂದವೆಂಬ ಪಕ್ಷಕಾರರ ನಿಜವಾದ ಉದ್ದೇಶ ಸ್ಪಷ್ಟವಾಗಿ ಗೋಚರಿಸುತ್ತದೆ ಹಾಗೂ ಪಕ್ಷಕಾರರು ಇದನ್ನು ಲೈಸೆನ್ಸೆಂದು ಸ್ಪಷ್ಟವಾಗಿ ಅರ್ಥೈಸಿಕೊಂಡಿರುತ್ತಾರೆಂದು ತಿಳಿದುಬರುತ್ತದೆ.ಆದ್ದರಿಂದ, ಭಾರತೀಯ ಅನುಭೋಗ ಅಧಿನಿಯಮದ 52 ನೇ ಪ್ರಕರಣದ ನಿಬಂಧನೆಗಳಲ್ಲಿ ಪಕ್ಷಕಾರರ ನಡುವೆ ಮಾಡಿಕೊಂಡಿರುವ

ಒಪ್ಪಂದದ ದಸ್ತಾವೇಜು ಲೈಸೆನ್ಸಾಗಿರುತ್ತದೆಂದು ಒಪ್ಪಿಕೊಂಡು ಈ ಹಿಂದೆ ಹೇಳಿದಂತೆ ಅವರು ಖಂಡ 4.2 ನ್ನು ಒಳಪಡಿಸಿಕೊಂಡಿರುತ್ತಾರೆ.

29. ಸದರಿ ದಸ್ತಾವೇಜು ಇಬ್ಬರೂ ಪಕ್ಷಕಾರರ ನಡುವೆ ಸಕ್ರಿಯವಾಗಿರುತ್ತದೆ.ಆದ್ದರಿಂದ, ಆಪಾದಿಸಿದಂತೆ ಸ್ವತ್ತು ವರ್ಗಾವಣೆ ಅಧಿನಿಯಮದ 105 ನೇ ಪ್ರಕರಣದಡಿಯಲ್ಲಿ ಪರಿಭಾಷಿಸಿದ ಭೋಗ್ಯ ಪತ್ರದಂತೆ ಅರ್ಥೈಸಿಕೊಳ್ಳಲಾಗುವುದಿಲ್ಲ.

30. ಸ್ವತ್ತು ವರ್ಗಾವಣೆ ಅಧಿನಿಯಮದ 105 ನೇ ಪ್ರಕರಣದ ಉಪಬಂಧಗಳಡಿಯಲ್ಲಿ ಭೋಗ್ಯದ ಪರಿಭಾಷೆಯನ್ನು ಪರಿಗಣಿಸುವುದು ಸೂಕ್ತವಾಗಿರುತ್ತದೆ.ಅದು ಈ ಮುಂದಿನಂತಿರುತ್ತದೆ:

“105. ಗೇಣಿಯ ಪರಿಭಾಷೆ.-ಸ್ಥಿರ ಸ್ವತ್ತಿನ ಗೇಣಿಯು ವ್ಯಕ್ತ ಅಥವಾ ಇಂಗಿತವಾದ ಒಂದು ನಿಶ್ಚಿತ ಕಾಲಕ್ಕಾಗಿ, ಅಥವಾ ಶಾಶ್ವತವಾಗಿ ಸಂದಾಯ ಮಾಡಿದ ಅಥವ ವಾಗ್ದಾನ ಮಾಡಿದ ಬೆಲೆಯ ವರ್ಗಾವಣೆ ಪಡೆದವನು ವರ್ಗಾವಣೆಕಾರನಿಗೆ ನಿಯತಕಾಲಿಕ ಅಥವಾ ನಿರ್ದಿಷ್ಟಪಡಿಸಿದ ಸಂದರ್ಭಗಳಲ್ಲಿ ಸಲ್ಲಿಸಬೇಕಾದ, ಅಥವಾ ಹಣದ ಬೆಳೆಯಪಾಲಿನ, ಸೇವೆಯ ಅಥವಾ ಮೌಲ್ಯವುಳ್ಳ ಯಾವುದೇ ಇತರ ವಸ್ತುವಿನ ಪ್ರತಿಫಲಕ್ಕಾಗಿ ಅಂಥ ಸ್ವತ್ತನ್ನು ಉಪಭೋಗಿಸುವ ಹಕ್ಕಿನ ವರ್ಗಾವಣೆ.ವರ್ಗಾವಣೆ ಪಡೆದವನು ಅಂಥ ನಿಬಂಧನೆಗಳ ಮೇಲೆ ಆ ವರ್ಗಾವಣೆಯನ್ನು ಅಂಗೀಕರಿಸಬೇಕು.

ಗೇಣಿಗೆ ಕೊಡುವವನು ಗೇಣಿದಾರ, ಪ್ರೀಮಿಯಮ್ ಮತ್ತು ಬಾಡಿಗೆ ಇವುಗಳ ಪರಿಭಾಷೆ.-ವರ್ಗಾವಣೆ ಕಾರರನು ಗೇಣಿಗೆ ಕೊಡುವವನೆಂದು ವರ್ಗಾವಣೆ ಪಡೆದವನನ್ನು ಗೇಣಿದಾರನೆಂದು, ಬೆಲೆಯನ್ನು ಪ್ರಿಮಿಯಮ್ ಎಂದು ಕರೆಯಲಾಗಿದೆ ಮತ್ತು ಹಾಗೆ ಸಲ್ಲಿಸಬೇಕಾದ ಹಣ ಪಾಲು, ಸೇವೆ ಅಥವಾ ಇತರ ವಸ್ತುವನ್ನು ಬಾಡಿಗೆಯೆಂದು ಕರೆಯಲಾಗಿದೆ. "

31. ಸದರಿ ಉಪಬಂಧದ ಓದಿನಿಂದ ಸ್ಥಿರ ಸ್ವತ್ತಿನ ಗೇಣಿಯು ವ್ಯಕ್ತ ಅಥವಾ ಇಂಗಿತವಾದ ಒಂದು ನಿಶ್ಚಿತ ಕಾಲಕ್ಕಾಗಿ, ಅಥವಾ ಶಾಶ್ವತವಾಗಿ ಸಂದಾಯ ಮಾಡಿದ ಅಥವ ವಾಗ್ದಾನ ಮಾಡಿದ ಬೆಲೆಯ ವರ್ಗಾವಣೆ ಪಡೆದವನು ವರ್ಗಾವಣೆಕಾರನಿಗೆ ನಿಯತಕಾಲಿಕ ಅಥವಾ ನಿರ್ದಿಷ್ಟಪಡಿಸಿದ ಸಂದರ್ಭಗಳಲ್ಲಿ ಸಲ್ಲಿಸಬೇಕಾದ, ಅಥವಾ ಹಣದ ಬೆಳೆಯಪಾಲಿನ, ಸೇವೆಯ ಅಥವಾ ಮೌಲ್ಯವುಳ್ಳ ಯಾವುದೇ ಇತರ ವಸ್ತುವಿನ ಪ್ರತಿಫಲಕ್ಕಾಗಿ ಅಂಥ ಸ್ವತ್ತನ್ನು ಉಪಭೋಗಿಸುವ ಹಕ್ಕಿನ ವರ್ಗಾವಣೆ, ವರ್ಗಾವಣೆ ಪಡೆದವನು ಅಂಥ ನಿಬಂಧನೆಗಳ ಮೇಲೆ ಆ ವರ್ಗಾವಣೆಯನ್ನು ಅಂಗೀಕರಿಸಬೇಕು.ವರ್ಗಾವಣೆಕಾರರನು ಗೇಣಿಗೆ ಕೊಡುವವನೆಂದು ವರ್ಗಾವಣೆ ಪಡೆದವನನ್ನು ಗೇಣಿದಾರನೆಂದು, ಬೆಲೆಯನ್ನು ಪ್ರಿಮಿಯಮ್ ಎಂದು ಕರೆಯಲಾಗಿದೆ ಮತ್ತು ಹಾಗೆ ಸಲ್ಲಿಸಬೇಕಾದ ಹಣ ಪಾಲು, ಸೇವೆ ಅಥವಾ ಇತರ ವಸ್ತುವನ್ನು ಬಾಡಿಗೆಯೆಂದು ಕರೆಯಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

32. ಭಾರತೀಯ ಅನುಭೋಗಗಳ ಅಧಿನಿಯಮದ 52 ನೇ ಪ್ರಕರಣದ ಉಪಬ ೦ ಧಗಳಡಿಯಲ್ಲಿನ ' ಪರವಾನಿಗೆ ' ಯನ್ನು ಈ ಮು ೦ ದಿನ ೦ ತೆ ಪರಿಭಾಷಿಸಲಾಗಿರುತ್ತದೆ.

“ ಲೈಸೆನ್ಸ್ ” ನ ಪರಿಭಾಷೆ.ಒಬ್ಬ ವ್ಯಕ್ತಿ, ಮತ್ತೊಬ್ಬನಿಗೆ ಅಥವಾ ನಿಗದಿತ ಸಂಖ್ಯೆಯ ಇತರೆ ವ್ಯಕ್ತಿಗಳಿಗೆ, ಜಮೀನನ್ನು ಕೊಟ್ಟವನ ಸ್ಥಿರಾಸ್ತಿಯಲ್ಲಿ ಅಥವಾ ಸ್ಥಿರಾಸ್ತಿಯ ಮೇಲೆ ಅಧಿಭೋಗದ ಹಕ್ಕು ಅಥವಾ ಅಧಿಭೋಗ

ಮುಂದುವರೆಯಲು ಹಕ್ಕನ್ನು ನೀಡಿದ್ದು, ಅಂಥ ಹಕ್ಕು ಇಲ್ಲದಿರುವಲ್ಲಿ, ಕೆಲವೊಮ್ಮೆ ಇದು ಕಾನೂನುಬಾಹಿರವೂ ಆಗಿರುತ್ತದೆ ಹಾಗೂ ಅಂಥ ಹಕ್ಕು ಸ್ವತ್ತಿನಲ್ಲಿನ ಅಧಿಭೋಗಕ್ಕೆ ಅಥವಾ ಹಿತಾಸಕ್ತಿಗೆ ಕಾರಣವಾಗುವುದಿಲ್ಲ.ಇಂಥ ಹಕ್ಕನ್ನು ಲೈಸೆನ್ಸ್ ಎಂದು ಕರೆಯಲಾಗುತ್ತದೆ.

33. ಸದರಿ ಪ್ರಕರಣದ ಓದು " ಪರವಾನಿಗೆ " ಯನ್ನು ಈ ಮುಂದಿನಂತೆ ಪರಿಭಾಷಿಸಲಾಗಿರುತ್ತದೆ.66 " ಲೈಸೆನ್ಸ್ " ನ ಪರಿಭಾಷೆ.ಒಬ್ಬ ವ್ಯಕ್ತಿ, ಮತ್ತೊಬ್ಬನಿಗೆ ಅಥವಾ ನಿಗದಿತ ಸಂಖ್ಯೆಯ ಇತರೆ ವ್ಯಕ್ತಿಗಳಿಗೆ, ಜಮೀನನ್ನು ಕೊಟ್ಟವನ ಸ್ಥಿರಾಸ್ತಿಯಲ್ಲಿ ಅಥವಾ ಸ್ಥಿರಾಸ್ತಿಯ ಮೇಲೆ ಅಧಿಭೋಗದ ಹಕ್ಕು ಅಥವಾ ಅಧಿಭೋಗ ಮುಂದುವರೆಯಲು ಹಕ್ಕನ್ನು ನೀಡಿದ್ದು, ಅಂಥ ಹಕ್ಕು ಇಲ್ಲದಿರುವಲ್ಲಿ, ಕೆಲವೊಮ್ಮೆ ಇದು ಕಾನೂನುಬಾಹಿರವೂ ಆಗಿರುತ್ತದೆ ಹಾಗೂ ಅಂಥ ಹಕ್ಕು ಸ್ವತ್ತಿನಲ್ಲಿನ ಅಧಿಭೋಗಕ್ಕೆ ಅಥವಾ ಹಿತಾಸಕ್ತಿಗೆ ಕಾರಣವಾಗುವುದಿಲ್ಲ.ಇಂಥ ಹಕ್ಕನ್ನು ಲೈಸೆನ್ಸ್ ಎಂದು ಕರೆಯಲಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.ಉದಾಹರಣೆಗಳ ಅಧಿನಿಯಮದ 52 ನೇ ಪ್ರಕರಣದಡಿಯಲ್ಲಿ ಪರಿಭಾಷಿಸಿದಂತೆ ಲೈಸೆನ್ಸ್ ಪಡೆದವನ ತೀರ ಕಡಿಮೆ ಸ್ಥಾನವು ಯಾವುದೇ ಕಾನೂನುಬಾಹಿರ ಸ್ಥಾನವನ್ನು ಕೇಮುಮಾಡುವಂತಿಲ್ಲ.ಆದರೆ ಈತ ಹೆಚ್ಚು ಅಲ್ಲದೆ, ಕಡಿಮೆಯೂ ಚ ಅಲ್ಲದೆ ಕೇವಲ ಕುಟುಂಬದ ಸದಸ್ಯನಾಗಿ ವಾದಿಸುತ್ತಿರುತ್ತಾನೆ.

34. ಭಾರತೀಯ ಅನುಭೋಗಗಳ ಅಧಿನಿಯಮದ 63 ಹಾಗೂ 64 ನೇ ಪ್ರಕರಣಗಳ ಉಪಬಂಧಗಳು ರದ್ದತಿ ಕುರಿತ ಲೈಸೆನ್ಸುದಾರರ ಹಕ್ಕುಗಳೊಂದಿಗೆ ಹಾಗೂ ಲೈಸೆನ್ನು ತೆರವುಗೊಳಿಸಿರುವಡೆ ಸ್ಪಷ್ಟವಾಗಿರುವಂಥ ತೆರವುಗೊಳಿಸುವಂಥ ಲೈಸೆನ್ಸುದಾರನ ಹಕ್ಕುಗಳೊಂದಿಗೆ ವ್ಯವಹರಿಸುತ್ತವೆ.ಲೈಸೆನ್ನುಪಡೆದವನು ಆ ಮೂಲಕ ಬಾಧಕಕ್ಕೊಳಗಾಗುವ ಸ್ವತ್ತನ್ನು ಬಿಡಲು ಯುಕ್ತ ಸಮಯಕ್ಕೆ ಹಾಗೂ ಅಂಥ ಸ್ವತ್ತಿನ ಮೇಲೆ ಇಲ್ಲಿರುವಂಥ ಯಾವುದೇ ಸರಕುಗಳನ್ನು ತೆಗೆಯುವುದಕ್ಕೆ ಹಕ್ಕುಳ್ಳವನಾಗಿರುತ್ತಾನೆ ಹಾಗೂ ಪರಿಗಣನೆಗಾಗಿ ಲೈಸೆನ್ಸನ್ನು ನೀಡಿರುವಡೆ, ಲೈಸೆನ್ಸುದಾರನ ಯಾವುದೇ ಸ್ವಂತ ದೋಷವಿಲ್ಲದಿರುವಾಗ, ಲೈಸೆನ್ಸ್ನಡಿಯಲ್ಲಿ ಸಂಪೂರ್ಣವಾಗಿ ಅನುಭೋಗಮಾಡುವುದಕ್ಕೆ ಮೊದಲು ನೀಡಿಕೆದಾರನನ್ನು ಹೊರಹಾಕಿದಲ್ಲಿ, ತಾನು ಗುತ್ತಿಗೆ ಪಡೆದಂಥದುಕ್ಕೆ ಸಂಬಂಧಿಸಿದಂತೆ, ಲೈಸೆನ್ಸಿನಡಿಯಲ್ಲಿ, ನೀಡಿಕೆದಾರನಿಂದ ಪರಿಹಾರವನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ.

35. ಭಾರತೀಯ ಅನುಭೋಗಗಳ ಅಧಿನಿಯಮ, 1882 ರ 52 ಹಾಗೂ 63 ನೇ ಪ್ರಕರಣಗಳ ಉಪಬಂಧಗಳನ್ನು ಪರಿಗಣಿಸುವಾಗ ಜಿ. ರಾಜ -ವಿರುದ್ಧ ಕರ್ನಾಟಕ ಸರ್ಕಾರ ಹಾಗೂ ಇತರರು (ಮೇಲೆ ಹೇಳದ) ಪ್ರಕರಣದಲ್ಲಿ ಈ ನ್ಯಾಯಾಲಯದ ಮಾನ್ಯ ಏಕ ಸದಸ್ಯ ನ್ಯಾಯಪೀಠದ ನ್ಯಾಯಾಧೀಶರು ತಮ್ಮ ತೀರ್ಪಿನ 7 ಹಾಗೂ 8 ನೇ ಕಂಡಿಕೆಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತಾರೆ.

7. 12.12.1998 ರಂದು ನಿರ್ಧಾರವಾದ ಕಾರ್ಯದರ್ಶಿ ಹಾಗೂ ಖಜಾಂಜಿ ಹಾಗೂ ಇತರರು ಪ್ರತಿನಿಧಿಸುವ ಜನರಲ್ ಮರ್ಚಂಟ್ ಅಸೋಸಿಯೇಷನ್ -ವಿರುದ್ಧ-ಆಯುಕ್ತರು, ಚನ್ನೈ-ಕಾನೂನು (ಮದ್ರಾಸ್) ನ್ನು ಪ್ರತಿನಿಧಿಸುತ್ತಿರುವ ಚನ್ನೈ ಮಹಾನಗರ ಪಾಲಿಕೆ ಪ್ರಕರಣದಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ಇಂತಹುದೇ ಪ್ರಶ್ನೆಯನ್ನು ಪರಿಗಣಿಸಿರುತ್ತದೆ.ಇದು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

" ವಜಾಗೊಳಿಸಿದ ತರುವಾಯ ಲೈಸೆನ್ಸುದಾರನ ಸ್ಥಾನವು ಕಾನೂನು ಬಾಹಿರವಾಗಿರುತ್ತದೆಂಬುದು ಸಮಾನವಾಗಿ ಇತ್ಯರ್ಥಗೊಂಡಿದ್ದು, ಅದು ಹಾಗೂ ಲೈಸೆನ್ಸುದಾರನು ಬಾಡಿಗೆದಾರನಂತೆ ಯಾವುದೇ ನ್ಯಾಯಿಕ

ಅಧಿಭೋಗವನ್ನು ಹೊ ೦ ದಿಲ್ಲದಿರುವುದರಿಂದ ಇವನನ್ನು ತೊಡೆದು ಹಾಕುವುದರಿಂದ ಲೈಸೆನ್ಸುದಾರನನ್ನು ನಿರ್ಬಂಧಿಸಲು ಯಾವುದೇ ನಿರ್ಬಂಧ ಕಾಜ್ಞೆಗೆ ಲೈಸೆನ್ಸುದಾರನು ಹಕ್ಕುಳ್ಳವನಾಗಿರುವುದಿಲ್ಲ.ಅಧಿಭೋಗವು ಯಾವಾಗಲೂ ಲೈಸೆನ್ನು ನೀಡುವವನಲ್ಲಿಯೇ ಉಳಿದುಕೊಂಡಿರುತ್ತದೆ ಹಾಗೂ ನೀಡಿರುವ ಎಲ್ಲವೂ ಲೈಸೆನ್ಸಿನ ನಿಬಂಧನೆಗಳಲ್ಲಿ ವಿಶೇಷಾಧಿಕಾರವಾಗಿದ್ದು, ಅಂಥ ಅನುದಾನವು ಇಲ್ಲದಿರುವಲ್ಲಿ ಇವೆಲ್ಲವೂ ಕಾನೂನು ಬಾಹಿರವಾಗಿ ಮಾರ್ಪಡಿಸುತ್ತವೆ.

ಸಾರ್ವಜನಿಕ ಮಾರುಕಟ್ಟೆಯಲ್ಲಿನ ಅ ೦ ಗಡಿಗಳು/ಮುಂಗಟ್ಟುಗಳಿಗೆ ಸಂಬಂಧಿಸಿದ ರಿಟ್ ಅರ್ಜಿದಾರರ ಅಧಿಭೋಗವು, ಅವರ ಸ್ಥಾನಮಾನವು ಪರವಾನಿಗೆ ದಾರನೆ ೦ ಬ ೦ ತಿರುವುದರಿಂದ ಮೂಲತಃ ನೀಡಿರುವ ಲೈಸೆನ್ಸಿಗೆ ಉಲ್ಲೇಖನೀಯವಾಗಿರುತ್ತದೆ.ಒಮ್ಮೆ ಅಂಥ ಲೈಸೆನ್ನು ವಜಾಗೊಂಡರೆ, ಮುಂಗಟ್ಟುಗಳ ಅಧಿಭೋಗವು ಅವು ಯಾವುದೇ ಹಕ್ಕನ್ನು ಹೊಂದಿಲ್ಲದಿರುವುದರಿಂದ ಕಾನೂನು ಬಾಹಿರವಾಗಿಬಿಡುತ್ತವೆ ಹಾಗೂ ವಜಾಗೊಳಿಸುವಿಕೆಯು ತರುವಾಯ ಅಂಥ ಅಧಿಭೋಗದ ಅನುಭೋಗವನ್ನು ಯಾವು ೯ ಶಾಸನಾತ್ಮಕ ಉಪಬ ೦ ಧದಿ ೦ ದಲೂ ಸಂರಕ್ಷಿಸಲಾಗುವುದಿಲ್ಲ.ಅನುಭೋಗಗಳ ಅಧಿನಿಯಮ, 1982 ರ 63 ನೇ ಪ್ರಕರಣದ ನಿಬಂಧನೆಗಳಲ್ಲಿ, ಪರವಾನಿಗೆಯನ್ನು ತೆರವುಗೊಳಿಸುವಡೆ, ಪರವಾನಿಗೆದಾರನನ್ನು,ಆತನಿಗೆ ತನ್ನ ಎಲ್ಲಾ ಸರಕುಗಳನ್ನು ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ ಸ್ವತ್ತನ್ನು ಬಿಟ್ಟು ತೆರಳಲು ಸೂಕ್ತ ಕಾಲಾವಧಿಗೆ ಹಕ್ಕುಳ್ಳವನಾಗಿರುತ್ತಾನೆ.ಪರವಾನಿಗೆಯನ್ನು ವಜಾಗೊಳಿಸಿದ ತರುವಾಯ ಅದೇ ಆವರಣದಲ್ಲಿ ಒಬ್ಬ ಅ ವ್ಯಕ್ತಿ ಮುಂದುವರೆದರೆ ಆತನ ಇರುವಿಕೆಯನ್ನು ಕಾನೂನು ಬಾಹಿರವೆಂದು ಈಗಾಗಲೇ ಹೇಳಿರುವುದರಿಂದ, ಇವನಿಗೆ ಆ ಆವರಣದಲ್ಲಿ ಮುಂದುವರೆಯಲು ಯಾವುದೇ ಹಕ್ಕಿನ ಸಹಮತಿಯಿರುವುದಿಲ್ಲ.

8. ಅನುಭೋಗಗಳ ಅಧಿನಿಯಮದ 63 ನೇ ಪ್ರಕರಣವು ತೆರವುಗೊಳಿಸುವಿಕೆ ಕುರಿತ ಪರವಾನಿಗೆದಾರನ ಹಕ್ಕನ್ನು ವಿಧಿಸುತ್ತದೆ.ಲೈಸೆನ್ಸ್ ಪಡೆದವನನ್ನು ತೆರವು ಗೊಳಿಸಿರುವಡೆಯಲ್ಲಿ, ಅದರಿಂದ ಬಾಧಿತನಾದ ಸ್ವತ್ತನ್ನು ಬಿಟ್ಟು ತೆರಳಲು ಹಾಗೂ ಅಂಥ ಸ್ವತ್ತಿನಲ್ಲಿ ಅಳವಡಿಸಲು ಅಂಗೀಕರಿಸಿದ್ದಂತ ಯಾವುದೇ ಸರಂಜಾಮುಗಳನ್ನು ತೆಗೆದುಕೊ ೦ ಡುಹೋಗಲು ಯುಕ್ತ ಕಾಲಾವಕಾಶಕ್ಕೆ ಹಕ್ಕುಳ್ಳವನಾಗಿರು .ಹಾಗಾಗಿ ಲೈಸೆನ್ನು ನೀಡುವವನನ ಸಂದರ್ಭದಲ್ಲಿ ಯಾವುದೇ ಸಮಯದಲ್ಲಾದರೂ ಅದು ತೆರವುಗೊಳಿಸಬಹುದಾದುದಾಗಿರತ್ತದೆ.ಈ ಪ್ರಕರಣವು ರೂಪಿಸಿರುವ ಉಪಬ ೦ ಧಗಳು, ಪರವಾನಿಗೆದಾರನು ತೆರವುಗೊಳಿಸುವ ಆತನ ಕ್ಷುಲ್ಲಕ ಹಾಗೂ ಕಿರುಕುಳ ಕಾರಿಯಾಗಿ ಹಕ್ಕನ್ನು ಚಲಾಯಿಸುವ ಮೂಲಕ ಅಪಾಯದಿಂದ ಲೈಸೆನ್ಸುದಾರನ ಹಿತಾಸಕ್ತಿಯನ್ನು ಸಂರಕ್ಷಿಸುವುದಕ್ಕೆ ಹೆಚ್ಚಿನ ಪರಿಹಾರಾತ್ಮಕವಾಗಿರುತ್ತದೆ. ಆದರೆ ಈ ಉಪಬಂಧಗಳಿಗೆ ಸ ೦ ಬ ೦ ಧಿಸಿದ ೦ ತೆ ಲೈಸೆನ್ಸುದಾರನ ಹಿತಾಸಕ್ತಿಯು ಲೈಸೆನ್ನು ಕೊಡುವವನ ಅನುಕಂಪದಲ್ಲಿರ ಬೇಕಾಗಿರುತ್ತದೆ.ಈ ಪ್ರಕರಣಕ್ಕನುಸಾರವಾಗಿ, ಲೈಸೆನ್ಸುದಾರನು,

( ಎ) ಆ ಮೂಲಕ ಬಾಧಕಕ್ಕೊಳಗಾದ ಸ್ವತ್ತನ್ನು ಬಿಡಲು; ಹಾಗೂ (ಬಿ) ಅಂಥ ಸ್ವತ್ತಿನ ಮೇಲೆ ಅಳವಡಿಸಲು ಅನುಮತಿಸಿರುವಂಥ ಯಾವುದೇ ಸರಂಜಾಮುಗಳನ್ನು ತೆರವುಗೊಳಿಸಲು, ಯುಕ್ತ ಕಾಲಾವದಿಗೆ ಹಕ್ಕುಳ್ಳವ ನಾಗಿರುತ್ತಾನೆ.

36. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಸ್ವತ್ತು ವರ್ಗಾವಣೆ ಅಧಿನಿಯಮ, 1882 ರ 52, 105 ಹಾಗೂ 107 ನೇ ಪ್ರಕರಣಗಳ ಉಪಬಂಧಗಳನ್ನು ಪರಿಗಣಿಸಿ, ಡೆಲ್ಟಾ ಅಂತರಾಷ್ಟ್ರೀಯ ಅಮಿಟೆಡ್ -ವಿರುದ್ಧ-ಶ್ಯಾಮ್

ಸುಂದರ್ ಗಣೇರಿವಾಲ ಹಾಗೂ ಮತ್ತೊಬ್ಬರು (ಮೇಲೆ ಹೇಳಿದ) ಪ್ರಕರಣದಲ್ಲಿನ ತೀರ್ಪಿನ 18 ಹಾಗೂ 19 ನೇ ಪ್ಯಾರಾಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿರುತ್ತದೆ.

"18. ನಮ್ಮ ಅಭಿಪ್ರಾಯದಲ್ಲಿ, ಅಪೀಲುದಾರರ ಪರ ಮಾನ್ಯ ವಕೀಲರ ನಿವೇದನೆಯನ್ನು ಒಪ್ಪಿಕೊಳ್ಳಬೇಕಾದ ಅಗತ್ಯತೆಯಿರುತ್ತದೆ.ಏಕೆಂದರೆ ಮೇಲೆ ಹೇಳಿದಂತೆ, ಇಲ್ಲಿ ಪಕ್ಷಕಾರರ ನಡುವೆ ಕಾರ್ಯರೂಪಕ್ಕೆ ತಂದಿರುವ ಪತ್ರವು ಬಾಡಿಗೆ ಅಧಿನಿಯಮದ ಉಪಬಂಧಗಳ ಕಾಠಿಣ್ಯತೆಯಿಂದ ತಪ್ಪಿಸಿಕೊಳ್ಳಲು ಹವಣಿಸಿರುತ್ತದೆ ಇಲ್ಲವೇ ಇಂಥ ಕೃಮ ದಾಖಲೆಗಳನ್ನು ಇತರೆ ಉದ್ದೇಶವನ್ನು ಸಾಧಿಸಲು ಕಾರ್ಯರೂಪಕ್ಕೆ ತಂದಿರುತ್ತಾರೆ.ಈ ಎರಡೂ ಸಂದರ್ಭಗಳ ಹಿನ್ನಲೆಯಲ್ಲಿ, ಪಕ್ಷಕಾರರ ಉದ್ದೇಶವನ್ನು ಪತ್ರದಲ್ಲಿ ಅವರು ಒದಗಿಸಿರುವ ಹಲವಾರು ಪದಾವಳಿಗಳಲ್ಲಿ ಅಭಿವ್ಯಕ್ತಿಸುವುದರಿಂದ ಕಲೆಹಾಕಲು ಅಗತ್ಯಪಡಿಸಲಾಗಿದ್ದು ಈ ಉದ್ದೇಶಕ್ಕಾಗಿ ದಸ್ತಾವೇಜಿನ 12 ನೇ ಖಂಡವನ್ನು ಪರಿಗಣನೆಗಾಗಿ ತೆಗೆದುಕೊಳ್ಳಬೇಕಾಗಿರುತ್ತದೆ ಹಾಗೂ ಪಕ್ಷಕಾರರು ಹೇಳಿರುವ ಹೇಳಿಕೆಗೆ ಯುಕ್ತವಾದ ಮಹತ್ವವನ್ನು ನೀಡಬೇಕೆಂದು ಅಗತ್ಯಪಡಿಸಿದ್ದು, ಈ ಮುಂದಿನಂತೆ ಉಪಬಂಧಿಸಲಾಗಿರುತ್ತದೆ:

" 1.2 ಈ ಮೂಲಕ, ಈ ಹೇಳೀಕೆಗಳನ್ನು ಪಶ್ಚಿಮ ಬಂಗಾಳ ಆವರಣಗಳ ಗೇಣಿದಾರಿಕೆ ಅಧಿನಿಯಮ ಅಥವಾ ಅದರ ಯಾವುದೇ ಮಾರ್ಪಾಡು ಅಥವಾ ತಿದ್ದುಪಡಿ ರೂಪದಲ್ಲಿ ಅಥವಾ ಇಲ್ಲಿನ ಪಕ್ಷಕಾರರ ನಡುವಿನ ಭೂಮಾಲೀಕರು ಅಥವಾ ಗೇಣಿದಾರರ ಯಾವುದೇ ಸಂಬಂಧವನ್ನು ಪ್ರದತ್ತಗೊಳಿಸಲು ಪರಿಗಣಿಸತಕ್ಕದ್ದಲ್ಲ ಅಥವಾ ಬಳಸತಕ್ಕದ್ದಲ್ಲ ಅಥವಾ ವ್ಯವಹರಿಸತಕ್ಕದ್ದಲ್ಲವೆಂದು ಪಕ್ಷಕಾರರಿಂದ ಹಾಗೂ ಅವರ ಅವರ ನಡುವೆ ನಡುವೆ ವ್ಯಕ್ತವಾಗಿ ಒಪ್ಪಿಕೊಳ್ಳಲಾಗಿರುತ್ತದೆ ಹಾಗೂ ಘೋಷಿತವಾಗಿರುತ್ತದೆ. "

19. ಮೇಲೆ ಹೇಳಿದ ದಸ್ತಾವೇಜಿನ ಪದಾವಳಿಯು ಯಾರೋ ಒಬ್ಬ ಅನಕ್ಷರಸ್ಥ ನಿರ್ಗತಿಕ ಅಥವಾ ಬಡವನ ಮನೆಗೆ ಅಥವಾ ಬ ವ್ಯವಹಾರಕ್ಕೆ ಉಪಬಂಧಿಸಿರುವುದಾಗಿರದೆ ಇದು ಎರಡು ಕಂಪನಿಗಳ ನಡುವೆ ಕಾರ್ಯರೂಪಕ್ಕೆ ಬಂದಿರುವುದಾಗಿದ್ದು, ಅಲ್ಲಿ ಇದನ್ನು ಸಂಪೂರ್ಣವಾಗಿ ಅರ್ಥೈಸಿಕೊಂಡ ತರುವಾಯ ಹಾಗೂ ಯಾವುದೇ ತಪ್ಪು ಅರ್ಥೈಸುವಿಕೆಗೆ ಅವಕಾಶವಾಗಿರುವುದಿಲ್ಲವೆಂದು ಅರ್ಥೈಸಿಕೊಳ್ಳಬೇಕಾಗಿರುತ್ತದೆ.ಇಲ್ಲಿ ಕೇವಲ ಲೈಸನ್ಸ್ಸ್ಸ್ ಸೃಜಿಸಲಾಗಿದೆಯೇ ಹೊರತು ಗೇಣಿಯನ್ನಲ್ಲವೆಂದು ನಿರ್ದಿಷ್ಟವಾಗಿ ಉಲ್ಲೇಖಿಸಲಾಗಿರುತ್ತದೆ.ಸದರಿ ಖಂಡವು, ಒಪ್ಪಂದವು ಲೈಸೆನ್ಸ್ ಆಗಿರುತ್ತದೆ ಹಾಗೂ ಇದನ್ನು ಯಾವುದೇ ರೂಪದಲ್ಲೂ ಗೇಣಿಯೆಂದು ಪರಿಗಣಿಸುವಂತಿಲ್ಲ ಅಥವಾ ಬಳಸುವಂತಿಲ್ಲ ಅಥವಾ ವ್ಯವಹರಿಸುವಂತಿಲ್ಲ ಅಥವ ಅರ್ಥೈಸಿಕೊಳ್ಳುವಂತಿಲ್ಲವೆಂದು ಪಕ್ಷಕಾರರ ನಡುವೆ ಭೂಮಾಲೀಕ ಹಾಗೂ ಗೇಣೀದಾರನ ನಡುವೆ ಯಾವುದೇ ಸಂಭಂಧವನ್ನು ಪ್ರದತ್ತಗೊಳೀಸಲು ಉಪಬಂಧ ಗೊಳಿಸಲು ಧನಾತ್ಮಕವಾಗಿರುತ್ತದೆ ಅಂತೆಯೇ ನಕಾರಾತ್ಮಕ ವಾಗಿಯೂ ಇರುತ್ತದೆ.ಪಕ್ಷಕಾರರು ಅವರ ನಡುವೆ ಭೂಮಾಲೀಕ ಹಾಗೂ ಗೇಣಿದಾರನೆ ಂ ದು ಯಾವುದೇ ಸ ಂ ಬ ಂ ಧವನ್ನು ಸೃಜಿಸುವುದರಿಂದ ಯಾವುದೇ ರೀತಿಯಲ್ಲಿ ದಸ್ತಾವೇಜನ್ನು ಅರ್ಥೈಸುವ ಂ ತಿಲ್ಲವೆ ಂ ದು ಸ ಂ ಪೂರ್ಣವಾಗಿ, ನೇರವಾಗಿ ಒಪ್ಪಿಕೊಂಡು, ಘೋಷಿಸಿಕೊಂಡು ತಮ್ಮ ಹಕ್ಕುಗಳನ್ನು ಅರ್ಥೈಸಿಕೊಳ್ಳುವಷ್ಟು ಸಾಮರ್ಥ್ಯವಿರುವಾಗ ಅವರ ಸಂಬಂಧಗಳನ್ನು, ಪತ್ರದಲ್ಲಿ ನಮೂದಿಸಿರುವ ಕೆಲವು ನಿಬಂಧನೆಗಳು ಉಭಯ ಅರ್ಥಗಳನ್ನು ಹೊಂದಿವೆ ಎಂಬ ಕಾರಣ ಮಾತ್ರದಿಂದಲೇ ಭೂಮಾಲೀಕ ಹಾಗೂ ಗೇಣಿದಾರನೆಂದು ಅರ್ಥೈಸಬೇಕೆಂದು ಅರ್ಥೈಸಿಕೊಳ್ಳಲು ಅಥವಾ ವ್ಯಾಖ್ಯಾನಿಸಲು ಇದು ಅನುಮತೀಯವಾಗಿರುವುದಿಲ್ಲ.ಮೇಲೆ ಹೇಳಿದಂತೆ, ಪಕ್ಷಕಾರರ ಉದ್ದೇಶವು ಅವರು ಬಳಸಿದ ಪದಗಳ ಅರ್ಥವನ್ನೇ ಹೊಂದಿರುತ್ತದೆ ಹಾಗೂ ಅವುಗಳಿಗೆ ಆ ಅರ್ಥದ

ಯಾವುದೇ ಸ್ವತಂತ್ರ ಉದ್ದೇಶವನ್ನು ಹೊ ೦ ದಿರುವುದಿಲ್ಲ.ಆದ್ದರಿಂದ ಉಚ್ಚ ನ್ಯಾಯಾಲಯದ ಚ ಮಾನ್ಯ ಏಕ ಸದಸ್ಯ ನ್ಯಾಯಪೀಠದ ನ್ಯಾಯಾಧೀಶರು, ಈ ಖಂಡವನ್ನು ಆತ ಗುತ್ತಿಗೆ ಪತ್ರದಂತೆ ಅರ್ಥೈಸಿಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆಂದು ಅಭಿಪ್ರಾಯಪಟ್ಟಿರುವುದು ಸರಿಯಾಗಿಯೇ ಇದೆ. "

37. ಹೈದರಾಬಾದ್ ಮೆಟ್ರೊಪಾಲಿಟನ್ ಅಭಿವೃದ್ಧಿ ಪ್ರಾಧಿಕಾರ ಹಾಗೂ ಇತರರು -ವಿರುದ್ಧ-ಹೊಟೇಲ್ ಮಲ್ಲಿಗಿ ಪ್ರೈ.ಲಿ. (ಮೇಲೆ ಹೇಳದ) ಪ್ರಕರಣದಲ್ಲಿ ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು, ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮ, 1996 ರ 9 ನೇ ಪ್ರಕರಣದ ಉಪಬಂಧಗಳನ್ನು ಪರಿಗಣಿಸಿ ತನ್ನ ತೀರ್ಪಿನ 24, 26 ಹಾಗೂ 29 ನೇ ಪ್ಯಾರಾಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

"24. ಗೇಣಿಯಿಂದ ಸಂಪೂರ್ಣವಾಗಿ ಭಿನ್ನವಾಗಿರುವ ಪರವಾನಿಗೆಯ ಪರಿಕಲ್ಪನೆಯು, ಪರವಾನಿಗೆಯ ಅವಧಿಯು ತೀರಿದ ತರುವಾಯ ಲೈಸೆನ್ಸು ಪಡೆದ ಆವರಣಗಳ ಮೇಲೆ ಯಾವುದೇ ಗೇಣಿಯ ಹಕ್ಕುಗಳನ್ನು ಒತ್ತಾಯಿಸುವ ಹಾಗೂ ಅಲ್ಲಿ ತನ್ನ ಅಧಿಭೋಗವನ್ನು ಮುಂದುವರೆಸಲು ಕೋರುವುದಕ್ಕೆ ಮುಕ್ತವಾಗಿರುವುದಿಲ್ಲ.ಪರವಾನಿಗೆ ಅವಧಿಯು ಮುಗಿದ ಮೇಲೆ ಅಲ್ಲಿನ ಸ್ಥಾನಮಾನವು ಅತಿಕ್ರಮ ಪ್ರವೇಶವಾಗಿರುತ್ತದೆ.ಯಾವುದೇ ಸಂದರ್ಭದಲ್ಲಿ, ಲೈಸೆನ್ಸುದಾರನು ತನ್ನ ನಿರ್ವಹಣೆಯ ಅವಧಿಯಲ್ಲಿ ಲೈಸೆನ್ಸಿನ ಪ್ರಯೋಜನಗಳನ್ನು ಕಾನೂನಾತ್ಮಕವಾಗಿ ಪಡೆಯುವಂಥ ಸ್ಥಾನದಲ್ಲಿದ್ದರೂ ಸಹ, ಪರಿಹಾರವನ್ನು/ಹಾನಿಯನ್ನು ತುಂಬಿಕೊಂಡುವಂತೆ ಕೋರುವುದು ಮಾತ್ರವೇ ಆಗಿರುತ್ತದೆ.ಲೈಸೆನ್ಸಿನ ಅವಧಿ ಮುಗಿದ ತರುವಾಯ ಲೈಸೆನ್ಸು ಪಡೆದ ಆವರಣದ ಅಧಿಭೋಗದಲ್ಲಿ ಮುಂದುವರೆಯುವ ಯಾವುದೇ ಹಕ್ಕನ್ನು ಒತ್ತಾಯಿಸಲು ಲೈಸೆನ್ಸುದಾರನು ಯಾವುದೆ ಕಾನೂನಾತ್ಮಕ ಹಾಗೂ ಸಮರ್ಥನೀಯ ಆಧಾರವನ್ನು ಹೊಂದಿರುವುದಿಲ್ಲ.ಅಧೀನ ನ್ಯಾಯಾಲಯವು, ಲೈಸೆನ್ಸು ಹಾಗೂ ಗೇಣಿ ಪದಾವಳಿಗಳನ್ನು ವಿನಿಮಯವಾಗಿ ಬಳಸಿರುವ ಮಧ್ಯಸ್ಥಿಕೆ ಒ.ಪಿ.ಸಂ. 2016 ರ 2229 ರಲ್ಲಿ ಹೊರಡಿಸಿರುವ 29.09.2016 ರಂದು ಹೊರಡಿಸಿರುವ ಆದೇಶದಿಂದ ಸ್ಪಷ್ಟವಾಗಿರುವಂತೆ ಲೈಸೆನ್ಸು ಹಾಗೂ ಗೇಣಿಯ ನಡುವಿನ ವ್ಯತ್ಯಾಸವನ್ನು ಗಮನಿಸಿರುವುದಿಲ್ಲ.

26. ಮಾನ್ಯ ಸ್ಥಾಯಿ ವಕೀಲರಾದ ಶ್ರೀ ವಿ. ನರಸಿಂಹ ಗೌಡ್ರರವರು, ಕಾಕ್ ಅಂಡ್ ಕಿಂಗ್ಸ್ ಲಿ. -ವಿರುದ್ಧ- ಇಂಡಿಯನ್ ರೈಲ್ವೆ ಕೇಟರಿಂಗ್ ಅಂಡ್ ಟೂರಿಸಿಂ ಕಾರ್ಪೋರೇಷನ್ ಲಿ. ಮತ್ತು ಮತ್ತೊಬ್ಬರು ಪ್ರಕರಣದ ತೀರ್ಪನ್ನು ಉದಾಹರಿಸಿ, ಲೈಸೆನ್ಸುದಾರನು, ಲೈಸೆನ್ಸು ಪಡೆದ ಆವರಣವನ್ನು ಅಭಿವೃದ್ಧಿಪಡಿಸಲು ಹಣವನ್ನು ಹೂಡಿರುತ್ತಾರೆಂಬ ಮಾತ್ರಕ್ಕೆ ಲೈಸೆನ್ಸು ಅವಧಿ ಅವಧಿ ಮೀರಿ ಅಧಿಭೋಗವನ್ನು ಮುಂದುವರೆಸಲು ಇದಕ್ಕೆ ಅನುಮತಿಸಲು ನಿರ್ಬಂಧಕಾಜ್ಞೆಯನ್ನು ಕೋರಲಾಗುವುದಿಲ್ಲವೆಂದೂ ವಾದಿಸಿರುತ್ತಾರೆ.ಈ ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು, ಗೇಣಿ ಚ ಪದಾವಳಿಯೊ ೦ ದಿಗೆ ವ್ಯವಹರಿಸಿದೆಯೇ ಹೊರತು, ಲೈಸೆನ್ಸಿನೊಂದಿಗಲ್ಲ.ಆದಾಗ್ಯೂ, ಗೇಣಿದಾರನು, ಗೇಣಿ ಒಪ್ಪಂದ/ವ್ಯವಸ್ಥೆಯು ವಜಾಗೊಂಡ ತರುವಾಯ ಗೇಣಿಪಡೆದ ಸಂಸ್ಥೆ (train) ಕಾರ್ಯಾರಂಭವನ್ನು ಅನುಮತಿಸಲು ಆಜ್ಞಾಪಕ ನಿರ್ಬಂಧಕಾಜ್ಞೆಗೆ ಹಕ್ಕುಳ್ಳವನಾಗಿರುವುದಿಲ್ಲ.ಸರ್ವೋಚ್ಚ ನ್ಯಾಯಾಲಯವು ಅರ್ಜಿದಾರರ ಪರಿಹಾರವು, ಒಪ್ಪಂದದ ಯಾವುದೇ ನಿಬಂಧನೆಗಳು ಹಾಗೂ ಷರತ್ತುಗಳ ವ್ಯತ್ಯಾಸ ಕುರಿತಾದ ಹಾನಿಗೆ ಸಂಬಂಧಿಸಿದ ಕೃತ್ಯದಲ್ಲಿರಬಹುದಾಗಿರುತ್ತದೆಂಬುದನ್ನು ಎತ್ತಿ ಹೇಳಿರುತ್ತದೆ.

29. ಇದನ್ನು ಯಾವುದೇ ಆಯಾಮದಿಂದ ನೋಡಿದರು, ಈ ನ್ಯಾಯಾಲಯಕ್ಕೆ ಒಪ್ಪಿಕೊಂಡಂತೆ, ಪರವಾನಿಗೆ ಅವಧಿ ಮುಗಿದ ತರುವಾಯ, ಲೈಸೆನ್ಸು ಪಡೆದಿದ್ದ ಆವರಣದ ಅಧಿಭೋಗದಲ್ಲಿ ಮುಂದುವರೆಯಲು

ಅನುಮತಿಸಿ ಲೈಸೆನ್ಸು ಪಡೆದವನ ಪರವಾಗಿ ನಿರ್ಬಂಧಕಾಜ್ಞೆಯನ್ನು ನೀಡಿರುವ ಅಧಿನ ನ್ಯಾಯಾಲಯದ ಕ್ರಮಕ್ಕೆ ಯಾವ ಸಮರ್ಥನೆಯೂ ಕಾಣುತಿಲ್ಲ.ಪರಿನಿಯ ಹಾಗೂ ತೀರ್ಪಜ ಕಾನೂನಿನಿಂದ ಸ್ಪಷ್ಟವಾದಂತೆ, ಲೈಸೆನ್ಸುದಾರ ವಾದದಿಂದ ಕ ಂ ಡುಬ ಂ ದ ಂ ತೆ, ಇವರಿಗೆ ಸ ಂ ಬ ಂ ಧಿಸಿದ ಂ ಥ ಒ ಂ ದೇ ಪರಿಹಾರವೆಂದರೆ, ಹಾನಿಗಳಿಗೆ ದಾವೆ ಹೂಡಬಹುದಾಗಿದ್ದು, ಲೈಸೆನ್ಸು ಅವಧಿ ಮುಗಿದ ತರುವಾಯ ಲೈಸೆನ್ಸು ಪಡೆದ ಆವರಣಗಳ ಮೇಲೆ ಯಾವುದೇ ಅತಿಕ್ರಮಣವನ್ನು ಹೇರುವಂತಿಲ್ಲ ಎಂಬುದಾಗಿರುತ್ತದೆ.೨೨

38. ಮೇಲೆ ಹೇಳಿದ ಕಾರಣಗಳ ಹಿನ್ನಲೆಯಲ್ಲಿ ಹಾಗೂ ನಿರ್ದಿಷ್ಟ ಖಂಡದ ಅಂದರೆದಿನಾಂಕ: 30.01.2015 ರ ದಸ್ತಾವೇಜಿನಲ್ಲಿ ನಮೂದಾದ 4.2 ರ ಹಿನ್ನಲೆಯಲ್ಲಿ ಭಾರತೀಯ ಅಧಿಭೋಗಗಳ ಅಧಿನಿಯಮ, 1882 ರ 52 ನೇ ಪ್ರಕರಣದ ಉಪಬಂಧಗಳಲ್ಲಿ ಉದ್ದೇಶಿಸಲಾದಂತೆ ಅಪೀಲುದಾರ ಹಾಗೂ ಪ್ರತ್ಯರ್ಜಿದಾರರ ನಡುವಿನ ವ್ಯವಹರಣೆಯು ಲೈಸೆನ್ಸಿನಾಗಿರುತ್ತದೆಂಬುದನ್ನು ಸ್ಥಿರೀಕರಿಸುತ್ತದೆ.

IV ಅಪೀಲುದಾರರ ಪರ ಮಾನ್ಯ ವಕೀಲರು ಉದಾಹರಿಸಿದ ತೀರ್ಪುಗಳು

39. ಅಪೀಲುದಾರರ ಪರ ಮಾನ್ಯ ವಕೀಲರು ಗೇಣಿ ಅಥವಾ ಪರವಾನಿಗೆ ಸಂಬಂಧಿಸಿದಂತೆ ಸಿ.ಎಂ.ಭೀಮ -ವಿರುದ್ಧ-ಪಿ.ಎನ್.ರಾಮಚಂದ್ರ ರಾವ್ (ಮೇಲೆ ಹೇಳದ) ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪನ್ನು ಚ ಉದಾಹರಿಸಿರುತ್ತಾರೆ.ಆ ಪ್ರಕರಣದಲ್ಲಿನ ಸ್ವತ್ತು ಎರ್ನಾಕುಲಂನ ಎಂ.ಜಿ. ರಸ್ತೆಯಲ್ಲಿನ ಒಂದು ಕಟ್ಟಡ (ವುಡ್ಲ್ಯಾಂಡ್ಸ್ ಕಟ್ಟಡವೆಂಬ ಖ್ಯಾತಿ ಹೊಂದಿರುವ) ದ ನೆಲ ಮಾಳಿಗೆಯಲ್ಲಿರುವ ಅಂಗಡಿಯಾಗಿರುತ್ತದೆ.ಪ್ರತ್ಯರ್ಜಿದಾರನು, ದಾವಾ ಆವರಣದ ಅಧಿಭೋಗದ ಪರವಾನಿಗೆ ವಜಾಗೊಂಡಿರುವ ಆಧಾರದ ಮೇಲೆ ಪ್ರತ್ಯರ್ಜಿದಾರನಿಗೆ ಅಂಗಡಿಯ ಮೇಲೆ ರಿಕ್ತ ಅಧಿಭೋಗವನ್ನು ಹಸ್ತಾಂತರಿಸಲು ಅಪೀಲುದಾರರಿಗೆ ನಿರ್ದೇಶಿಸಿ, ಆಜ್ಞಾಪಕ ನಿರ್ಬಂಧಕಾಜ್ಞೆಯನ್ನು ಹೊರಡಿಸಲು ಕೋರಿ ಸಿವಿಲ್ ದಾವೆಯನ್ನು ಸಲ್ಲಿಸಿರುತ್ತಾನೆ.ಅಧಿವಿಚಾರಣಾ ನ್ಯಾಯಾಲಯವು, ಇಬ್ಬರು ಅಪೀಲುದಾರರಲ್ಲಿ (ತಂದೆ ಹಾಗೂ ಮಗ) ಒಬ್ಬರು ಗೇಣಿದಾರರಾಗಿದ್ದು, ಕೇವಲ ಲೈಸೆನ್ಸುದಾರರಾಗಿರುವುದಿಲ್ಲವೆಂಬ ಅಂಶವನ್ನು ದಾಖಲಿಸಿ ದಾವೆಯನ್ನು ವಜಾಗೊಳಿಸಬೇಕೆಂದು ನಿರ್ದೇಶಿಸಿರುತ್ತದೆ.ಮಗ ಗೇಣಿದಾರನಾಗಿದ್ದು, ಅಪೀಲುದಾರನಾಗಿ ಉಲ್ಲೇಖಿತನಾಗಿರುತ್ತಾನೆ.ಡಿಕ್ರಿಯನ್ನು ಮೊದಲ ಅಪೀಲಿನಲ್ಲಿ ನಿರ್ವಹಿಸಲಾಗಿರುತ್ತದೆ.ಭೂಮಾಲೀಕನು ಸಲ್ಲಿಸಿದ ಎರಡನೇ ಅಪೀಲಿನಲ್ಲಿ ಉಚ್ಚ ನ್ಯಾಯಾಲಯವು ಎರಡು ಅಧೀನ ನ್ಯಾಯಾಲಯಗಳ ತೀರ್ಪುಗಳ ಹಾಗೂ ಚ ಡಿಗ್ರಿಗಳನ್ನು ವಜಾಗೊಳಿಸಿರುತ್ತದೆ.ಅಂತಹ ಸಂದರ್ಭಗಳಲ್ಲಿ, ಸನ್ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು, ಸಾಮಾನ್ಯವಾಗಿ ಹೇಳುವುದಾದರೆ, ' ಗೇಣಿ ' ಹಾಗು ' ಪರವಾನಿಗೆ ' ನಡುವಿನ ವ್ಯತ್ಯಾಸವನ್ನು ದಸ್ತಾವೇಜಿನ ಸಂಪೂರ್ಣ ಓದಿನಿಂದ ಅರ್ಥೈಸಿ ಕೊಂಡಂತೆ ಪಕ್ಷಕಾರರ ವಾಸ್ತವ ಉದ್ದೇಶದಿಂದ ಕಂಡುಬರುವ ಮೂಲಕ ನಿರ್ಧರಿಸಬೇಕಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.ಈ ಹಿಂದೆ ಹೇಳಿದಂತೆ ಸರ್ವೋಚ್ಚ ನ್ಯಾಯಾಲಯ ವಿಧಿಸಿರುವ ಕಾನೂನಿನೊಂದಿಗೆ ಈ ನ್ಯಾಯಾಲಯಕ್ಕೆ ಯಾವುದೇ ಭಿನ್ನಾಭಿಪ್ರಾಯವಿಲ್ಲದಿದ್ದಾಗ್ಯೂ, ಪ್ರಸ್ತುತ ಪ್ರಕರಣದಲ್ಲಿನ ಪಕ್ಷಕಾರರ ನಡುವೆ ಮಾಡಿಕೊಂಡಿರುವ ಒಪ್ಪಂದ ಅದರಲ್ಲೂ ವಿಶೇಷವಾಗಿ 42 ನೇ ಖಂಡದಲ್ಲಿ ನಮೂದಾಗಿರುವ ವಿಷಯದ ಸಂಪೂರ್ಣ ಓದಿನಿಂದ ಪಕ್ಷಕಾರರ ನಡುವಿನ ವ್ಯವಹರಣೆಯು ಪರವಾನಿಗೆಯಾಗಿರುತ್ತದೆಯೇ ಹೊರತು ಗೇಣಿಯಲ್ಲ.ಆದ್ದರಿಂದ, ಸದರಿ ತೀರ್ಪು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಗೆ ಅನ್ವಯವಾಗಿರುವುದಿಲ್ಲ.

40. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಪ್ರಕರಣವಾಗಿರುವ ನ್ಯೂ ಬಸ್-ಸ್ಟ್ಯಾಂಡ್ ಶಾಪ್ ಓನರ್ ಅಸೋಸಿಯೇಷನ್ ವಿರುದ್ಧ ಕಾರ್ಪೋರೇಷನ್ ಆಫ್ ಕೊಝಿಕೊಡ್ ಮತ್ತು ಮತ್ತೊಬ್ಬರು ತೀರ್ಪನ್ನು ಉದಾಹರಿಸಿರುತ್ತಾರೆ.ಸದರಿ ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ದಿಷ್ಟ ಪರಿಹಾರ ಚ ಅಧಿನಿಯಮದ ಸ್ವತ್ತು ವರ್ಗಾವಣೆ ಅಧಿನಿಯಮ ಹಾಗೂ ಕೇರಳ ಸ್ಟಾಂಪು ಅಧಿನಿಯಮಗಳ ಉಪಬಂಧಗಳೊಂದಿಗೆ ವ್ಯವಹರಿಸುವಾಗ ಪಕ್ಷಕಾರರ ಉದ್ದೇಶವು ಪರವಾನಿಗೆಯನ್ನು ಸೃಜಿಸುವುದಾಗಿರುತ್ತದೆಯೇ ಹೊರತು ಗೇಣಿಯನ್ನಲ್ಲ ಹಾಗೂ ಅನನ್ಯವಾದ ಸ್ವಾಧೀನದ ಹಕ್ಕನ್ನು ನಿಗಮವು ಉಳಿಸಿಕೊಳ್ಳುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.ವಿಷಯದ ಆ ಹಿನ್ನಲೆಯಲ್ಲಿ, ನಿಗಮ ಹಾಗೂ ಅಂಗಡಿಗಳನ್ನು ಹೊಂದಿರುವವರ ನಡುವೆ ಸೃಜನೆಯಾದಂಥ ಸಂಬಂಧವು ಲೈಸೆನ್ಸ್ ಕೊಡುವವನ ಹಾಗೂ ಲೈಸೆನ್ಸ್ ಪಡೆಯುವವನದಾಗಿರುತ್ತದೆಯೇ ಹೊರತು ಗೇಣಿ ನೀಡಿದವನು ಅಥವಾ ಗೇಣಿ ಪಡೆದವನ ಸಂಬಂಧವಾಗಿರುವುದಿಲ್ಲ.ಸದರಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನು, ಪ್ರಸ್ತುತ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಗೆ ಪ್ರತ್ಯೇಕವಾಗಿ ಅನ್ವಯವಾಗುತ್ತದೆ.ದಾವೆಯಲ್ಲಿನ ಇಬ್ಬರೂ ಪಕ್ಷಕಾರರು ಉದ್ದೇಶಪೂರ್ವಕವಾಗಿ ಮಾಡಿಕೊಂಡಿರುವ ಅಂದರೆ ಇಬ್ಬರೂ ಪಕ್ಷಕಾರರ ನಡುವೆ ಜಾರಿಗೆ ಬಂದಿರುವಂಥ ದಸ್ತಾವೇಜು ಲೈಸೆನ್ಸ್ ಎಂಬುದು ಸ್ಪಷ್ಟವಾಗಿರುತ್ತದೆ.

41. ಈಸ್ಟ ಇಂಡಿಯಾ ಹೊಟೇಲ್ಸ್ ಅ. -ವಿರುದ್ಧ ಸಿಂಡಿಕೇಟ್ ಬ್ಯಾಂಕ್ ಟ ಪ್ರಕರಣದಲ್ಲಿ ಅಪೀಲುದಾರರ ಪರ ಮಾನ್ಯ ವಕೀಲರು ಉದಾಹರಿಸಿದ ತೀರ್ಪಿನಮಟ್ಟಿಗೆ ಅದು ಅಪೀಲುದಾರರು ಹಾಗೂ ಪ್ರತ್ಯರ್ಜಿದಾರರು ಮಾಡಿಕೊಂಡ ಗೇಣಿ ಹಾಗೂ ಪರವಾನಿಗೆಯ ಒಪ್ಪಂದ ಪತ್ರದ ಪ್ರಕರಣವಾಗಿರುತ್ತದೆ.ಒಪ್ಪಂದವು ಮೂಲ ಅವಧಿ ಮೀರಿದ ಮೇಲೆ ಗೇಣಿಯ ಅವಧಿಯ ನವೀಕರಣಕ್ಕೆ ಸಂಬಂಧಿಸಿದ ಒಡಂಬಡಿಕೆಯನ್ನು ಒಳಗೊಂಡಿದ್ದು ಪ್ರತ್ಯರ್ಜಿದಾರನು ಅವಧಿಯ ನವೀಕರಣಕ್ಕಾಗಿ ಅರ್ಜಿಸಲ್ಲಿಸಿರುತ್ತಾನಾದರೂ ಅಪೀಲುದಾರನು, ಇದು ಗೇಣಿಯಾಗಿರುವುದರಿಂದ ಒಪ್ಪಂದದ ಅವಧಿಯನ್ನು ನವೀಕರಿಸಲು ನಿರಾಕರಿಸಿರುತ್ತಾನೆ.ಆದ್ದರಿಂದ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಾನೂನನ್ನು ಕೈಗೆತ್ತಿಕೊಳ್ಳಲು ಹಾಗೂ ಚ ಕಾನೂನಿನ ಯುಕ್ತಪಾಲನೆಯಿಲ್ಲದೆ ವಾಸ್ತವಿಕ ಅಧಿಭೋಗದಲ್ಲಿನ ವ್ಯಕ್ತಿಯನ್ನು ಹೊರಹಾಕಿ ಯಾರೊಬ್ಬರಿಗೂ ಅನುಮತಿಸಿರುವುದಿಲ್ಲ ಅಂತಿಮವಾಗಿ, ಸದರಿ ನಿರ್ಣಯವು ವಿರೋಧಾಭಾಸದ ತೀರ್ಪಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.ಆದ್ದರಿಂದ 50 ನೇ ಪ್ಯಾರಾದಲ್ಲಿ, ನೀಡಲಾದ ವಿರೋಧಾಭಾಸದ ತೀರ್ಪಿನ ಹಿನ್ನಲೆಯಲ್ಲಿ ವಿವಾದವನ್ನು ಮರುತೀರ್ಮಾನಿಸಲು ವಿಸ್ತೃತಪೀಠವನ್ನು ರಚಿಸಲು ಸನ್ಮಾನ್ಯ ಭಾರತದ ಮಾನ್ಯ ನ್ಯಾಯಮೂರ್ತಿಗಳ ಮುಂದೆ ವಿಷಯವನ್ನು ಮಂಡಿಸಬಹುದಾಗಿರುತ್ತದೆ.ಈ ಹಿಂದೆ ಹೇಳಿದಂತೆ ವಿವಾದಾತ್ಮಕ ತೀರ್ಪುಗಳ ಹಿನ್ನಲೆಯಲ್ಲಿ ಸದರಿ ತೀರ್ಪು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಗೆ ಅನ್ವಯವಾಗುವುದಿಲ್ಲ.

42. ರಾಮೇಗೌಡ (ಮೃತರಾಗಿರುತ್ತಾರೆ) ರವರ ಕಾನೂನು ಪ್ರತಿನಿಧಿಗಳು ವಿರುದ್ಧ-ಎಂ.ವರದಪ್ಪ ನಾಯ್ಡು (ಮೃತರಾಗಿರುತ್ತಾರೆ) ರವರ ಕಾನೂನು ಪ್ರತಿನಿಧಿಗಳು ಹಾಗೂ ಮತ್ತೊಬ್ಬರು 10 ° ಪ್ರಕರಣದೊಂದಿಗೆ ಮಾನ್ಯ ವಕೀಲರು ಉದಾಹರಿಸಿದ ತೀರ್ಪಿನ ಮಟ್ಟಿಗೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನಿರ್ದಿಷ್ಟ ಪರಿಹಾರ ಚ ಅಧಿನಿಯಮದ 6 ನೇ ಪ್ರಕರಣದ ಉಪಬಂಧಗಳನ್ನು ಪರಿಗಣಿಸುವಾಗ, " ಇತ್ಯರ್ಥಗೊಂಡ ಅಧಿಭೋಗದಲ್ಲಿನ ಅಧಿಭೋಗದಾರನನ್ನು ಕಾನೂನಿನ ಅವಲಂಬನೆಯಿಲ್ಲದೆ ಸ್ವಾಧೀನ ತಪ್ಪಿಸುವಂತಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ಎಲ್ಲಿ ಒಬ್ಬ ವ್ಯಕ್ತಿಯು ಭಾವಿತ ಸ್ವರೂಪದ ಮಾಲೀಕನಾಗಿ ಒಂದು ಜಮೀನಿನ

ಅಧಿಭೋಗದಲ್ಲಿ ಅಲ್ಲಿ ಮಾಲೀಕತ್ವದ ಮೂಲ ಹಕ್ಕುಗಳನ್ನು ಸಂಭಾವ್ಯವಾಗಿ ಚಲಾಯಿಸುವುದನ್ನು ಎಲ್ಲರೂ ನಿಖರವಾಗಿ ಉತ್ತಮವಾದ ಹಕ್ಕೆಂದು ಒಪ್ಪಿಕೊಂಡಿದ್ದರೂ ಅವರು ವಾಸ್ತವವಾದ ಮಾಲೀಕರಾಗಿರುವುದಿಲ್ಲವೆಂಬುದು ಸಹ ಒಂದು ವಾದವಾಗಿರುತ್ತದೆ.ಪ್ರಸ್ತುತ ಪ್ರಕರಣದಲ್ಲಿ, ಅಪೀಲುದಾರನು, ಪರವಾನಿಗೆ ಪಡೆದಿರುವ ಹಾಗೂ ಕಾಲಕಾಲಕ್ಕೆ ನವೀಕರಿಸಿಕೊಂಡಿರುವ ಆಧಾರದ ಮೇಲೆ ವಿವಾದದಲ್ಲಿರುವ ಸ್ವತ್ತಿನ ಅಧಿ ಬಗದಲ್ಲಿ ತಾನಿರುವನೆ ಂ ದು ಕ್ಲೇಮುಮಾಡಿರುತ್ತಾನೆಂದೂ, ಅಂತಿಮವಾಗಿ 30.01.2015 ರಂದು ಪಕ್ಷಕಾರರ ನಡುವೆ ಆದ ಕಳೆದ ಪರವಾನಿಗೆಯ ಅವಧಿಗೊಂಡಿರುತ್ತದೆಂಬುದು ಈಗಿನ ವಾದವಾಗಿರುತ್ತದೆ.ಆದ್ದರಿಂದ ಸದರಿ ವಾದದ ವಾಸ್ತವಾಂಶಗಳು, ಈಗಿನ ವಾದದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಗೆ ಅನ್ವಯವಾಗುವುದಿಲ್ಲ.

43. ಕೃಷ್ಣ ರಾಮ್ ಮಹಲೆ (ಮೃತರಾಗಿರುತ್ತಾರೆ) ರವರ ಕಾನೂನು ಸಮ್ಮತ ವಾರಸುದಾರರು ವಿರುದ್ಧ ಶ್ರೀಮತಿ ಶೋಭಾ ವೆಂಕಟ್ ರಾವ್ (ಮೇಲೆ ಹೇಳಿದ) ಪ್ರಕರಣದ ಮತ್ತೊಂದು ತೀರ್ಪನ್ನು ಅಪೀಲುದಾರ ಪರ ಮಾನ್ಯ ವಕೀಲರು ಉದಾಹರಿಸಿರುತ್ತಾರೆ.1956 ರ ಡಿಸೆಂಬರ 25 ರಂದು ಪಕ್ಷಕಾರರ ನಡುವೆ ಮಾಡಿಕೊಂಡ ಒಪ್ಪಂದಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಪರಿಹಾರ ಅಧಿನಿಯಮ 1963 ರ 6 ನೇ ಪ್ರಕರಣದ ಉಪಬಂಧಗಳಡಿಯಲ್ಲಿನ ಪ್ರಕರಣವಾಗಿದ್ದು, ಇದರಲ್ಲಿ, ವಾದಿಯು ತಾನೇ ಮಾಲೀಕನಾಗಿದ್ದಂಥ ' ಸೆಂಟ್ರಲ್ ಕೆಫೆ, ಉಡುಪಿ ' ಎಂದು ಇತ್ತೀಚೆಗೆ ಹೆಸರನ್ನು ಪಡೆದಂಥ ' ಮೀನಾಕ್ಷಿ ಭವನ ' ಎಂದೇ ಪ್ರಸಿದ್ಧವಾದ ರೆಸ್ಟೋರೆಂಟ್ ವ್ಯವಹಾರ ನಡೆಸಲು ಅನುಮತಿ ಪಡೆದಿದ್ದು, ಇದನ್ನು ಗೇಣಿಗೆ ಪಡೆದಿದ್ದ ಆವರಣದಲ್ಲಿ ನಡೆಸುತ್ತಿದ್ದನು.ಈ ರೆಸ್ಟೋರೆಂಟ್ ವಿಶ್ವಾಸ್ ನಿವಾಸ್ ಕಿಂಗ್, ಎಡ್ವರ್ ರಸ್ತೆ ಪರೇಲ್, ಬಾಂಬೆಯಲ್ಲಿ ಇತ್ತು. ಈ ಒಪ್ಪಂದದ ಅವಧಿಯ ಐದು ವರ್ಷಗಳಾಗಿದ್ದು, ಇದನ್ನು ಮರುನವೀಕರಿಸುವ ಆಯ್ಕೆಯೊಂದಿಗೆ 1956 ರ ಡಿಸೆಂಬರ್ 25 ರಿಂದ ಆರಂಭಿಸಲಾಗಿತ್ತು.ಒಪ್ಪಂದದ ಮೇರೆಗೆ ಪ್ರತಿವಾದಿ ಸಂ .3 ನ್ನು ಮಾಲೀಕನೆಂದು ಉಲ್ಲೇಖಿಸಿ, ವಾದಿಯನ್ನು ನಿರ್ವಾಹಕನೆಂದು ಉಲ್ಲೇಖಿಸಲಾಗಿತ್ತು.ಅಂತ ಸಂದರ್ಭಗಳಲ್ಲಿ ಅತಿಕ್ರಮಣಕಾರರನ್ನು ಅಧಿಭೋಗದಿಂದ ತೆಗೆದುಹಾಕುವುದು ಅನುಮತೀಯವೇ ಅಥವಾ ಇಲ್ಲವೆ ಎಂಬುದಕ್ಕೆ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಭಾರತದಲ್ಲಿ, ವ್ಯಕ್ತಿಗಳು ಬಲವಂತದ ಅಧಿಭೋಗವನ್ನು ಚ ತೆಗೆದುಕೊಳ್ಳುವುದು ಅನುಮತೀಯವಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ನ್ಯಾಯಾಲಯದ ಮೂಲಕ ಹಕ್ಕುಳ್ಳವರಾಗಿರುವುದರಿಂದ ಅಂಥ ಸ್ವಾಧೀನವನ್ನು ಪಡೆದುಕೊಳ್ಳಲು ಅವರನ್ನು ಅಗತ್ಯಪಡಿಸಲಾಗಿರುತ್ತದೆ.ನಿಜವಾದ ಮಾಲೀಕರು ಕಾನೂನಿನಡಿಯಲ್ಲಿನ ಪರಿಹಾರಗಳ ಆಶ್ರಯಗಳನ್ನು ತೆಗೆದುಕೊಳ್ಳುವ ಮೂಲಕ ಅತಿಕ್ರಮಣಕಾರರನ್ನು ಸ್ವಾಧೀನ ತಪ್ಪಿಸಲಾಗುವುದಿಲ್ಲವೆಂಬುದನ್ನು ಕಾನೂನು ಅಗತ್ಯಪಡಿಸುತ್ತದೆ.ಒಪ್ಪಿಕೊಂಡಂತೆ, ಪ್ರಸ್ತುತ ಪ್ರಕರಣದಲ್ಲಿ, ಅಪೀಲುದಾರರು ಹಾಗೂ ಪ್ರತ್ಯರ್ಜಿದಾರರ ನಡುವಿನ ವ್ಯವಹರಣೆಗಳು ಲೈಸೆನ್ನು ಕೊಡುವವರು ಹಾಗೂ ಲೈಸೆನ್ಸನ್ನು ಪಡೆಯುವವರಂತೆ ಭಾರತೀಯ ಅಧಿಭೋಗಗಳ ಅಧಿನಿಯಮದ 52 ನೇ ಪ್ರಕರಣದ ಉಪಬಂಧಗಳಡಿಯಲ್ಲಿರುತ್ತದೆ.ಆದ್ದರಿಂದ, ಮಾನ್ಯ ವಕೀಲರು ಉಲ್ಲೇಖಿಸಿದ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳು, ಪ್ರಸ್ತುತ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಗೆ ಅನ್ವಯವಾಗುವುದಿಲ್ಲ.

44. ಅಂತಿಮವಾಗಿ, ಅಪೀಲುದಾರರ ಪರ ಮಾನ್ಯ ವಕೀಲರು ಎಐಆರ್ ಪಾಟೀಲ್ ಎಕ್ಸಿಬಿಟರ್ (ಪ್ರೈ) ಅ. -ವಿರುದ್ಧ-ಬೆಂಗಳೂರು ನಗರ ಮಹಾನಗರ ಪಾಲಿಕೆ (ಮೇಲೆ ಹೇಳಿದ) ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪನ್ನು ಉದಾಹರಿಸಿದ್ದು, ಇಲ್ಲಿ, ಪಾಟೀಲ್ ಎಕ್ಸಿಬಿಟರ್ (ಪ್ರೈ) ಲಿ.-ಅಪೀಲುದಾರರು ಬೆಂಗಳೂರು ನಗರ ಪಾಲಿಕೆಯ ಗೇಣಿದಾರನಾಗಿದ್ದು, ವಾದಪತ್ರದ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದ ಪ್ರತ್ಯರ್ಜಿದಾರರು ದಿನಾಂಕ

31.10.1981 ರಂದಿನ ಗೇಣಿ ಪತ್ರದಡಿಯಲ್ಲಿ ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಪಬ್ಲಿಕ್ ಯಟಿಲಿಟಿ ಬಿಲ್ಡಿಂಗ್‌ನಲ್ಲಿರುವ ಸಿನಿಮಾ ಮಂದಿರವಾಗಿರುತ್ತದೆ.ಗೇಣಿಯ ಅವಧಿಯ ಅಂತಿಮ ಹಂತಕ್ಕೆ ಬಂದಿದ್ದು, 31.08.1985 ರಂದು ಅದರ ಗಡುವು ಮೀರಿರುತ್ತದೆ.ಗೇಣಿಯಡಿಯಲ್ಲಿನ ಅವಧಿ ಮೀರುವ ಮೊದಲು 31.10.1981 ರಂದು ಮಾರಾಟ ಪತ್ರದ 27 ನೇ ಖಂಡದಲ್ಲಿ ಹೇಳಲಾಗಿರುವ ಸದರಿ ಗೇಣಿಯನ್ನು ನವೀಕರಿಸಲು ಆಪಾದಿತ ಒಪ್ಪಂದದ ನಿರ್ದಿಷ್ಟ ಜಾರಿಗೆ ಪ್ರಸ್ತುತ ದಾವೆಯನ್ನು ಅಪೀಲುದಾರರು ಹೂಡಿರುತ್ತಾರೆ.ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಪರಿಗಣನೆಗೆ ತೆಗೆದುಕೊಂಡು ಈ ನ್ಯಾಯಾಲಯವು, ಅಪೀಲುದಾರರು ಸೀಮಿತ ನಿರ್ಬಂಧಕಾಜ್ಞೆಗೆ ಹಕ್ಕುಳ್ಳವರಾಗಿರುತ್ತಾರೆಯೇ ಹೊರತು ನಿರ್ಬಂಧನೆಗಳಿಲ್ಲವೆ ಂ ದು ಅಭಿಪ್ರಾಯಪಟ್ಟಿರುತ್ತದೆ.ಅಪೀಲುದಾರರನ್ನು ಒತ್ತಾಯವಾಗಿ ಹಾಗೂ ಅನ್ಯಥಾ ಕಾನೂನಿಗನುಸಾರವಾಗಿರದ ಹೊರತು ಪ್ರತ್ಯರ್ಜಿದಾರರ ಸ್ವಾಧೀನ ತಪ್ಪಿಸುವುದರಿಂದ ನಿರ್ಬಂಧಿಸಲಾಗಿರುತ್ತದೆ.ಪಕ್ಷಕಾರರ ನಡುವೆ ಸ್ಪಷ್ಟತೆಯಿದ್ದು 31.10.1981 ರಂದು ಗೇಣಿಪತ್ರವನ್ನು ಮಾಡಿಕೊಂಡಿದ್ದು, ಗೇಣಿಯ ಅವಧಿಯು ತೀರುವ ಮೊದಲು, ಅಪೀಲುದಾರರು ಈ ನ್ಯಾಯಾಲಯದಲ್ಲಿ ಕದ ಬಡಿದಿರುತ್ತಾರೆ.ಹಾಗೂ ಈ ನ್ಯಾಯಾಲಯವು, ಕಾನೂನಿನ ಬೆಂಬಲವಿಲ್ಲದೆ ಅಪೀಲುದಾರನು ಸ್ವಾಧೀನ ತಪ್ಪಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ಸದರಿ ವಾದವು, ಒಪ್ಪಿಕೊಂಡಂತೆ, ಪರವಾನಿಗೆಯೆಂದು ಸ್ಪಷ್ಟವಾಗಿ ಗೋಚರಿಸುವ ಪಕ್ಷಕಾರರ ನಡುವೆದಿನಾಂಕ: 30.01.2015 ರಂದು ಮಾಡಿಕೊಂಡಿರುವ ಲೈಸೆನ್ಸಿನ ಒಪ್ಪಂದ ಪತ್ರದಂತೆ ನಿರೂಪಿತವಾಗಿರುವ ದಸ್ತಾವೇಜುಗಳಿಗೆ ಅನ್ವಯವಾಗುವುದಿಲ್ಲ.

VII ಅಪೀಲುದಾರರು ಸಲ್ಲಿಸಿದ ದಾವೆಗೆ ಸಂಬಂಧಿಸಿದಂತೆ:

45. ಪ್ರಸ್ತುತ ಅಪೀಲನ್ನು, ಅಪೀಲುದಾರನುದಿನಾಂಕ: 15.12.2000 ರ ಗೇಣಿ ಒಪ್ಪಂದ ಬಲದಿಂದ ಪ್ರತಿವಾದದಡಿಯಲ್ಲಿ ತಾನೇ ಕಾನೂನುಬದ್ಧ ಗೇಣಿದಾರನೆಂದು ವಾದಿಸಿ, ಕಾನೂನಿನ ಯುಕ್ತ ಪ್ರಕ್ರಿಯೆಯನ್ನು ಅನುಸರಿಸದೆ ದಾವಾ ಸ್ವತ್ತನ್ನು ಬಾಧಕಕ್ಕೊಳಪಡಿಸುವ ಯಾವುದೇ ರೀತಿಯನ್ನು ಅತಿಕ್ರಮಿಸುವುದಾಗಲಿ ಅಥವಾ ಉಲ್ಲಂಘಿಸುವುದಾಗಲಿ ದಾವಾ ಅನುಸೂಚಿತ ಸ್ವತ್ತಿನ ವಾದಿಗಳ ಶಾಂತಿಯುತ ಸ್ವಾಧೀನ ಹಾಗೂ ಅನುಭೋಗದೊಂದಿಗೆ ಮಧ್ಯಪ್ರವೇಶಿಸುವ ಯಾವುದೇ ರೀತಿಯಿಂದ ಪ್ರಸ್ತುತ ಪ್ರತ್ಯರ್ಜಿದಾರ ಪ್ರತಿವಾದಿ, ಆತನ ಪ್ರತಿನಿಧಿಗಳು ಮುಂತಾದವುಗಳನ್ನು ನಿರ್ಬಂಧಿಸಲು ಶಾಶ್ವತ ನಿರ್ಬಂಧಕಾಜ್ಞೆಗೆ ಸಂಬಂಧಿಸಿದಂತೆ 31.03.2017 ರಂದು ಒ.ಎಸ್.ಸ 0.2306/2017 ನ್ನು ಸಲ್ಲಿಸಿರುತ್ತಾನೆಂದು ಹೇಳುವುದು ಸೂಕ್ತವಾದುದಾಗಿರುತ್ತದೆ.ಸದರಿ ದಾವೆಯಲ್ಲಿ, ತಪ್ಪು ಮಾರ್ಗದರ್ಶನದಿಂದ ಅಪೀಲುದಾರ ವಾದಿಗಳು ಎ.ಎ.ಸಂ .196/2016 ರಲ್ಲಿ LXI ಹೆಚ್ಚುವರಿ ಸಿಟಿ ಸಿವಿಲ್ ಹಾಗೂ ಸತ್ರ ನ್ಯಾಯಾಧೀಶರು, ಬೆಂಗಳೂರು ಇವರ ನ್ಯಾಯಾಲಯದಲ್ಲಿ ಮಧ್ಯಸ್ಥಿಕೆ ಅರ್ಜಿಯನ್ನು ಸಲ್ಲಿಸಿರುತ್ತಾನೆಂದೂ ಹೇಳಲಾಗಿರುತ್ತದೆ.ವಿಚಾರಣಾವಧಿ ಅರ್ಜಿಯನ್ನು 04.08.2016 ರಂದು ಅಧಿವಿಚಾರಣಾ ನ್ಯಾಯಾಧೀಶರು ವಜಾಗೊಳಿಸಿರುತ್ತಾರೆ.ಇದರಿಂದ ಬಾಧಿತರಾದ ಪ್ರಸ್ತುತ ಅಪೀಲುದಾರರು ಆರಂಭದಲ್ಲಿ, ಈ ನ್ಯಾಯಾಲಯದ ಮುಂದೆ ಸಂಕೀರ್ಣ ಮೊದಲ ಅಪೀಲು ಸಂ. 5818/2016 ನ್ನು ಸಲ್ಲಿಸಿ, ಅದನ್ನು ಹಿಂಪಡೆದು, ತರುವಾಯ ರಿಟ್ ಅರ್ಜಿ ಸಂ. 52717/2016 ರನ್ನು ಸಲ್ಲಿಸಿದ್ದು, ಇದನ್ನು ಮಧ್ಯಸ್ಥಿಕೆ ಅರ್ಜಿಯ ಅಂತಿಮ ವಿಲೆಯೂ ಇತ್ಯಾರ್ಥದಲ್ಲಿದ್ದು, ದಾವಾ ಅನುಸೂಚಿತ ಸ್ವತ್ತಿನಲ್ಲಿ ಪ್ರತಿವಾದಿಯು ಹಸ್ತಕ್ಷೇಪ ಮಾಡುವಂತಿಲ್ಲವೆಂದು ನಿರ್ಬಂಧಿಸಿ 30.01.2017 ರಂದು ವಿಲೆ ಮಾಡಲಾಗಿರುತ್ತದೆ.ಒ.ಎಸ್.ಸಂ.2306/2017 ರಲ್ಲಿನ ವಾದಪತ್ರದ 19, 20 ಹಾಗೂ 21 ನೇ ಪ್ಯಾರಾಗಳನ್ನು ಇಲ್ಲಿ ಉದ್ಧರಿಸುವುದು ಸಮುಚಿತವಾದುದಾಗಿದ್ದು, ಅವು ಈ ಮುಂದಿನಂತಿರುತ್ತವೆ:

“19. ವಾದಿಯು, ಕಾನೂನಿನ ನ್ಯಾಯಾಲಯವು ಅಡ್ಡಿಪಡಿಸುವುದಕ್ಕೆ ಕಾರಣವಾಗುವುದರಿಂದ ಪ್ರತಿವಾದಿಯನ್ನು ನಿರ್ಬಂಧಿಸಲು ಕಾನೂನು ಪರಿಹಾರವನ್ನು ಕೋರಲು ಕಾನೂನು ವೃತ್ತಿಪರದೊಂದಿಗೆ ಸಮಾಲೋಚಿಸಿದ್ದು, ಬೆಂಗಳೂರಿನ ವಾದಿಗಳ ವಕೀಲರು, ಪ್ರತಿವಾದಿಗಳು ಅಥವಾ ಅವರ ಏಜೆಂಟರುಗಳನ್ನು ನಿರ್ಬಂಧಿಸಲು ಎಎ ಸಂ .196/2016 ರಲ್ಲಿ ಹೆಚ್ಚುವರಿ ನಗರ ಸಿವಿಲ್ ಹಾಗೂ ಸತ್ರ ನ್ಯಾಯಾಲಯಗಳ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮಧ್ಯಸ್ಥಿಕೆ ಅರ್ಜಿಯನ್ನು ಸಲ್ಲಿಸಿದ್ದಲ್ಲದೆ, ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮ, 1996 ರ 9 (ಡಿ) ಪ್ರಕರಣದಡಿಯಲ್ಲಿ ಮಧ್ಯಂತರ ಅರ್ಜಿಯನ್ನು ಸಹ ಸಲ್ಲಿಸಲಾಗಿದ್ದು, ಇದನ್ನು 04.08.2016 ರಂದು ಅಧಿವಿಚಾರಣಾ ನ್ಯಾಯಾಧೀಶರು ವಜಾಗೊಳಿಸಿದ್ದು, ಇದರಿಂದ ಬಾಧಿತರಾದ ವಾದಿಗಳು ಸನ್ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಎಂ.ಎಫ್.ಎ ಯನ್ನು ಸಲ್ಲಿಸಿದ್ದು, ಅದನ್ನು ಹಿಂದಕ್ಕೆ ಪಡೆಯುವಂತೆ ವಜಾಗೊಳಿಸಿದ್ದು, ತರುವಾಯ ವಾದಿಯು ರಿಟ್ ಅರ್ಜಿ ಸಂ .52717/2016 (ಜಿಎಂ-ಸಿಪಿಸಿ) ಯನ್ನು ಸಲ್ಲಿಸಿದ್ದು, ಸನ್ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು 01.12.2016 ರಂದು ಮಧ್ಯಸ್ಥಿಕೆ ಅರ್ಜಿಯ ಅಂತಿಮ ವಿಲೆಯ ಇತ್ಯರ್ಥದಲ್ಲಿದ್ದು, ವಾದಿಯ ದಾವಾ ಅನುಸೂಚಿತ ಸ್ವತ್ತಿಗೆ ಮಧ್ಯೆ ಪ್ರವೇಶಿಸಬಾರದೆಂದು ಪ್ರತಿವಾದಿಯನ್ನು ನಿರ್ಬಂಧಿಸಿ ಮಧ್ಯಂತರ ಆದೇಶವನ್ನು ಸನ್ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಹೊರಡಿಸಿದ್ದು ದಿನಾಂಕ ಚ 30.01.2017 ರ ರಿಟ್ ಅರ್ಜಿ ಸಂ .52717/2016 ರಲ್ಲಿ ಸನ್ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಹೊರಡಿಸಿದ ಆದೇಶದ ಚ ಪ್ರತಿಯನ್ನು ಸನ್ಮಾನ್ಯ ನ್ಯಾಯಾಲಯದ ಅವಗಾಹನೆಗೆ ಹಾಜರು ಪಡಿಸಲಾಗಿರುತ್ತದೆ.

20. ಮಧ್ಯಸ್ಥಿಕೆ ಅರ್ಜಿಯನ್ನು 16.03.2017 ರಂದು ವಜಾಗೊಳಿಸಿ, ವಾದಿಯ ಪರ ವಕೀಲರು, ಯುಕ್ತ ಪರಿಹಾರ ಕೋರುವುದಕ್ಕೆ ಸಂಬಂಧಿಸಿದಂತೆ ಸರಿಯಾದ ಕಾನೂನುಬದ್ಧ ವೇದಿಕೆಯನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಬದಲಾಗಿ, ತಪ್ಪಾದ ವ್ಯಾಖ್ಯಾನವನ್ನು ಅಳವಡಿಸಿಕೊಂಡಿದ್ದು, ಇದರಿಂದ ಪ್ರತಿವಾದಿಯ ವಿರುದ್ಧ ನಿರ್ಬ ಂ ಧಕಾಜ್ಞೆಯ ಆದೇಶವನ್ನು ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ.ತಪ್ಪಾದ ವೇದಿಕೆಯನ್ನು ಆಯ್ಕೆ ಮಾಡಿಕೊಂಡಿದ್ದಾಗ್ಯೂ ಕಾನೂನು ಸಮ್ಮತ ಸ್ವಾಧೀನದ ಸಂರಕ್ಷಣೆಗೆ ಸಂಬಂಧಿಸಿದ ನಿರ್ಬಂಧಕಾಜ್ಞೆಗೆ ಯುಕ್ತ ದಾವೆಯಯನ್ನು ಸಲ್ಲಿಸಲು ಹಾಗೂ ಪ್ರತಿವಾದಿಯಿಂದ ನಷ್ಟ ಹಾಗೂ ಹಾನಿಗಳಿಗೆ ದಾವೆ ಹೂಡಲು ಯಾವುದೇ ಅಡತಡೆಯಿರುವುದಿಲ್ಲ.

21. ಪ್ರತಿವಾದಿಯು, 16.03.2017 ರಂದಿನ ಮಧ್ಯಸ್ಥಿಕೆ ಅರ್ಜಿಯನ್ನು ವಜಾಗೊಳಿಸಿರುವುದನ್ನು ಅನುಚಿತವಾಗಿ ಬಳಸಿಕೊಂಡು, ದಾವಾ ಅನುಸೂಚಿತ ಸ್ವತ್ತಿನಲ್ಲಿ 30 ವ್ಯಕ್ತಿಗಳೊಂದಿಗೆ ಬಂದು, ವಾದಿಗೆ, ತನ್ನ ಎಲ್ಲಾ ಕುದುರೆಗಳನ್ನು ಹಾಗೂ ಉಪಕರಣಗಳನ್ನು ತೆಗೆದುಕೊಂಡು ಹೋಗುವಂತೆ, ಇಲ್ಲದಿದ್ದರೆ ಕುದುರೆಗಳನ್ನು ಕೊಲ್ಲುವುದಾಗಿಯು ಹಾಗೂ ಇಲ್ಲಿ ಉಳಿದರೆ ಮುಂದಾಗುವ ತೀವ್ರತರವಾದ ಅನಾಹುತಗಳಿಗೆ ವಾದಿಯೇ ಕಾರಣನಾಗುತ್ತಾನೆಂದು ಹೆದರಿಸಿರುತ್ತಾನೆಂದು ವಾದಿಯು ನಿವೇದಿಸಿಕೊಂಡಿರುತ್ತಾರೆ.ವಾದಿಯು, ಪ್ರತಿವಾದಿಯ ವಿರುದ್ಧ ದೂರು ದಾಖಲಿಸಲು ಸಂಬಂಧಪಟ್ಟ ವ್ಯಾಪ್ತಿಯಿರುವ ಪೊಲೀಸ್ ಠಾಣೆಗೆ ತೆರಳಿದಾಗ, ಪೊಲೀಸರು, ನ್ಯಾಯಾಲಯದಿಂದ ಯುಕ್ತವಾದ ಆದೇಶವನ್ನು ತಂದರೆ, ತರುವಾಯ ನ್ಯಾಯಾಲಯದ ಆದೇಶವನ್ನು ಮಾತ್ರವಾಗಿ ಅನುಷ್ಠಾನಗೊಳಿಸುವುದಾಗಿ ಉತ್ತರಿಸಿರುತ್ತಾರೆ.ವಾದಿಗೆ ಪ್ರತಿವಾದಿಯಿಂದ ತನ್ನ ಕಾನೂನುಬದ್ಧ ಸ್ವಾಧೀನವನ್ನು ಸಂರಕ್ಷಿಸಲು ಕೋರಿಕೆ ಸಲ್ಲಿಸಿದ್ದಾಗ್ಯೂ ತನ್ನ ವಕೀಲರು ಯಾವ ಕಾರಣಕ್ಕೆ ಮಧ್ಯಸ್ಥಿಕೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆಂಬುದೂ ತಿಳಿದಿರುವುದಿಲ್ಲ.ವಕೀಲರಿಂದ ದೊರೆತ ತಪ್ಪು ಕಾನೂನು ಸಲಹೆಯ ವಾದಿಗೆ ಅನ್ಯಾಯವಾಗಲು ಕಾರಣವಾಗಬಾರದು.ಸಮತೆಯು, ಪ್ರತಿವಾದಿಯ ಸ್ವಾಧೀನಕ್ಕೆ

ಪಡೆದುಕೊಳ್ಳಲು ಕಾನೂನಿನ ಯುಕ್ತ ಪ್ರಕ್ರಿಯೆಯನ್ನು ಆಶ್ರಯಿಸಿರುವವರೆಗೂ ಈ ನ್ಯಾಯಾಲಯದಿಂದ ತನ್ನ ಸ್ವಾಧೀನವನ್ನು ಸಂರಕ್ಷಿಸಿಕೊಳ್ಳಲು ಕಾನೂನುಬದ್ಧವಾಗಿ ಹಕ್ಕುಳ್ಳವಳಾಗಿರುತ್ತಾಳೆ ೦ ಬುದನ್ನು ನಿರೀಕ್ಷಿಸುತ್ತದೆ."

46. ದುರಾದೃಷ್ಟವಶಾತ್ ಪ್ರಸ್ತುತ ಅಪೀಲುದಾರನು ಎಂ.ಎಫ್.ಎ. ಸಂ. 2620/2017 ರಲ್ಲಿ ಹೊರಡಿಸಿದ 30.03.2017 ರ ಮಧ್ಯಂತರ ಆದೇಶದ ಬಲದಿಂದ ದಾವೆಯ ನಿರರ್ಥಕವಾಗಿದ್ದುದರಿಂದ ದಾವೆಯನ್ನು ಹಿಂದಕ್ಕೆ ತೆಗೆದು ಕೊಳ್ಳಲಾಗಿದೆಯೆಂದು ವಾದಿಸಿ ಅಧಿವಿಚಾರಣಾ ನ್ಯಾಯಾಲಯದ ಎದುರು ದಿನಾಂಕ 05.04.2017 ರಂದು ಮೆಮೊವನ್ನು ಸಲ್ಲಿಸಿರುತ್ತಾರೆ.ತದನುಸಾರವಾಗಿ, ದಾವೆಯನ್ನು ಹಿಂದಕ್ಕೆ ತೆಗೆದುಕೊಂಡಿರುವಂತೆ ವಜಾಗೊಳಿಸಬೇಕಾಗಿರುತ್ತದೆ.ತಪ್ಪು ಮಾರ್ಗದರ್ಶನಕ್ಕೆ ಸಂಬಂಧಿಸಿದಂತೆ ವಕೀಲರ ಮೇಲೆ ಆಪಾದನೆ ಮಾಡಿ ಬೇರೆಬೇರೆ ವಾದಾಂಶಗಳೊಂದಿಗೆ ಬೇರೆಬೇರೆ ನ್ಯಾಯಾಲಯಗಳಿಗೆ ಎಡತಾಕಿದ ಅಪೀಲುದಾರರ ಸದರಿ ನಡೆಯು, ಇವರು ಶುದ್ಧ ಹಸ್ತದೊಂದಿಗೆ ನ್ಯಾಯಾಲಯಕ್ಕೆ ಬಂದಿರುವುದಿಲ್ಲವೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.ಪ್ರಸ್ತುತ ಅಪೀಲುದಾರನು, ಪ್ರಸ್ತುತ ಸಂಕೀರ್ಣ ಮೊದಲ ಅಪೀಲನ್ನು ಸಲ್ಲಿಸಿದ ತರುವಾಯ ದಾವೆಯ ವಿಲೆಗೆ ಸಂಬಂಧಿಸಿದಂತೆ ಈ ನ್ಯಾಯಾಲಯದ ಗಮನಕ್ಕೆ ತಂದಿರುವುದಿಲ್ಲ ಹಾಗೂ ಈತ ಈ ನ್ಯಾಯಾಲಯದ ಮುಂದೆ ವಾಸ್ತವ ವಿಚಾರಣೆಗಳನ್ನು ಬಚ್ಚಿಟ್ಟಿರುತ್ತಾರೆಂದೂ ವಾದಿಸಿರುತ್ತಾರೆ.

VIII ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿದ ನಿರ್ಣಯಗಳು

47. ಅಧಿವಿಚಾರಣಾ ನ್ಯಾಯಾಲಯವು, ವಿವಾದಾಂಶಗಳನ್ನು ರೂಪಿಸಿದ ತರುವಾಯ ಪ್ರಶ್ನಿತ ಆದೇಶದಲ್ಲಿ ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮ, 1996 ರ 9 (ಡಿ) ಪ್ರಕರಣದಡಿಯಲ್ಲಿನ ಅಧಿನಿಯಮವನ್ನು ಪರಿಗಣಿಸುವಾಗ, ಅಪೀಲುದಾರ ಹಾಗೂ ಪ್ರತ್ಯಪೀಲುದಾರನ ನಡುವಿನ ವ್ಯವಹರಣೆಯು ಪರವಾನಿಗೆಯಾಗಿರುತ್ತದೆಂದು ಹಾಗೂ ಪ್ರತ್ಯರ್ಜಿದಾರನು ದಿನಾಂಕ 30.01.2015 ರ ಒಪ್ಪಂದವನ್ನು ವಜಾಗೊಳಿಸಿರುವುದು ಊರ್ಜಿತವಾಗಿದ್ದು, ಅಪೀಲುದಾರರು ಪರವಾನಿಗೆಯ ಅವಧಿಯ ನವೀಕರಣ/ವಿಸ್ತರಣೆಯ ಭರವಸೆಯ ಮಾತನ್ನು ನಿರ್ದಿಷ್ಟವಾಗಿ ನಡೆಸಿಕೊಳ್ಳಲು ಕೋರುವುದಕ್ಕೆ ಹಕ್ಕುಳ್ಳವರಾಗಿರುವುದಿಲ್ಲವೆಂದು ದಾಖಲಿಸಿರುತ್ತದೆ.ಮುಂದುವರೆದು ಅಧಿವಿಚಾರಣಾ ನ್ಯಾಯಾಲಯವು, ಅಪೀಲುದಾರರು ಹಾಜರುಪಡಿಸಿದ ಪರವಾನಿಗೆಯ ಒಪ್ಪಂದದ ಓದಿನಿಂದ, ಪತ್ರವು ಪರವಾನಿಗೆಯ ಒಪ್ಪಂದ ಪತ್ರವೆಂಬಂತೆ ಸ್ಪಷ್ಟವಾಗಿ ಒಕ್ಕಣೆಮಾಡಲಾಗಿದೆಯೆಂಬುದು ಕಂಡುಬರುತ್ತದೆ.ಪ್ರತ್ಯರ್ಜಿದಾರರು ನೋಟೀಸನ್ನು ಹೊರಡಿಸಿ ಆವರಣವನ್ನು ಖಾಲಿಮಾಡಲು ಹಾಗೂ 04.07.2016 ರಂದು ಅಥವಾ ಮೊದಲು ಪ್ರತ್ಯರ್ಜಿದಾರನಿಗೆ ಶಾಂತಿಯುತವಾಗಿ ಸ್ವಾಧೀನವನ್ನು ಹಸ್ತಾಂತರಿಸಲು ನಿರ್ದೇಶಿಸಿ ದಿನಾಂಕ 30.01.2015 ರಂದು ಅಪೀಲುದಾರನ ಪರವಾನಿಗೆಯನ್ನು ವಜಾಮಾಡಿರುತ್ತಾರೆಂಬುದು ನಿರ್ವಿವಾದವಾದ ವಾಸ್ತವಾಂಶವಾಗಿರುತ್ತದೆ.ಆರಂಭಿಕ ಹಂತದಲ್ಲಿನ ವಾದಾಂಶಗಳಲ್ಲಿಯೇ, ಅಪೀಲುದಾರರು, ಪ್ರತ್ಯರ್ಜಿದಾರನೊಂದಿಗೆ ಪರವಾನಿಗೆಯ ಒಪ್ಪಂದವನ್ನು ಮಾಡಿಕೊಂಡಿರುತ್ತೇನೆಂದೂ ಆದರೆ ತರುವಾಯ ಇದು ಗೇಣಿ ಆಗಿರುತ್ತದೆಯೇ ಹೊರತು ಪರವಾನಿಗೆಯಿಲ್ಲವೆಂಬ ಮೂಲ ಹೇಳಿಕೆಗಿಂತ ಭಿನ್ನವಾಗಿ ತನ್ನ ಹೇಳಿಕೆಯನ್ನು ವ್ಯತ್ಯಸಗೊಳಿಸಿ ಕೊಂಡಿರುತ್ತಾನೆಂದು ವಾದಿಸಿರುತ್ತಾರೆ.ಅದು ಹಾಗಿದ್ದಲ್ಲಿ, ಅಪೀಲುದಾರನು, ಅಂಥ ವಾದವನ್ನು ವ್ಯವಹರಣೆಗಳ ಆರಂಭಿಕ ಹಂತದಲ್ಲಿಯೇ ಎತ್ತಬೇಕಾಗಿತ್ತು.ಪಕ್ಷಕಾರರ ನಡುವೆ ಮಾಡಿಕೊಂಡಿರುವ ಗೇಣಿಯನ್ನು ರದ್ದುಪಡಿಸಿದ ಸ್ವರೂಪದಲ್ಲಿ ಮಾಡಿಕೊಂಡ ಪರವಾನಿಗೆಯ ವ್ಯವಹರಣೆಗೆ ಸಂಬಂಧಿಸಿದ ಮಧ್ಯಸ್ಥಿಕೆ ವ್ಯವಹರಣೆಗಳಲ್ಲಿ ಪ್ರಸ್ತಾಪಿಸಬೇಕೆಂದು ಕೋರಿದ್ದು ವಾದವಿವಾದವನ್ನು ತೀರಾ ಮೊದಲಿನ

ಹಂತದಲ್ಲೇ ಪ್ರಸ್ತಾಪಿಸಬೇಕಾಗಿತ್ತು.ಆದಾಗ್ಯೂ, ವಾದಗಳಲ್ಲಿ, ಅರ್ಜಿದಾರರು, ದಿನಾಂಕ 30.03.2015 ರ ಪರವಾನಿಗೆ ಪತ್ರದ ನಿಬಂಧನೆಗಳನ್ನು ಉದಾಹರಿಸಿರುತ್ತಾರೆ.ಅರ್ಜಿದಾರರು, ಪ್ರತ್ಯರ್ಜಿದಾರರೊಂದಿಗಿನ ಸಂಬಂಧವನ್ನು ಮುಕ್ತವಾಗಿ ದಾಖಲಿಸಿರುತ್ತಾರೆ.ಅರ್ಜಿದಾರನು ಕರಾರು ಜನ್ಯ ಸಂಬಂಧದ ಕರಾರನ್ನು ಮಾಡಿಕೊಂಡು, ಈತನ ವ್ಯವಹರಣೆಯನ್ನು ಕರಾರಿನ ಕಾನುನಿಗನುಸಾರವಾಗಿ ನಿರ್ವಹಿಸಲಾಗಿರುತ್ತದೆ.ಅಪೀಲುದಾರನು ಉದಾಹರಿಸಿದ ದಸ್ತಾವೇಜಿನಲ್ಲೆಡೆ, ಪರವಾನಿಗೆ ಹಾಗೂ ಪಕ್ಷಕಾರರನ್ನು ಲೈಸೆನ್ನು ಪಡೆದವನು ಹಾಗೂ ಲೈಸೆನ್ನು ನೀಡುವವನೆಂದೇ ಒಕ್ಕಣೆಮಾಡಲಾಗಿರುತ್ತದೆ.4.2 ನೇ ಖಂಡದಲ್ಲಿನ ಒಪ್ಪಂದದಲ್ಲಿ ಈ ಮುಂದಿನಂತೆ ನಿಸ್ಸಂಗಿದ್ದವಾಗಿ ಸ್ಪಷ್ಟವಾಗಿ ವಿವರಿಸಲಾಗಿರುತ್ತದೆ:

" ಇಲ್ಲಿನ ಪಕ್ಷಕಾರರು, ಈ ಒಪ್ಪಂದದಡಿಯಲ್ಲಿ ಲೈಸೆನ್ನುದಾರನಿಗೆ ಲೈಸೆನ್ನು ನೀಡುವವನು ಅನುದಾನಿಸಿದ ಹಕ್ಕು ಭಾರತೀಯ ಅಧಿಭೋಗಗಳ ಅಧಿನಿಯಮದ 52 ನೇ ಪ್ರಕರಣದ ನಿಬಂಧನೆಗಳಲ್ಲಿ ಐತೀರ್ಪು ನೀಡಿದ ಪರವಾನಿಗೆಯಾಗಿರುತ್ತದೆಂದು ಹಾಗೂ ಅದು ಗೇಣಿ ಅಥವಾ ಅಧಿಭೋಗ ಅಥವಾ ಅಧಿಭೋಗ ಅಥವಾ ಅನುದಾನವೆ ಂ ಬ ತಾತ್ಪರ್ಯ ಹೊಂದಿರುವುದಿಲ್ಲವೆಂದು ಒಪ್ಪಿಕೊಂಡಿರುತ್ತಾರೆ ಹಾಗೂ ಒಡಂಬಡಿಕೆ ಮಾಡಿಕೊಂಡಿರುತ್ತಾರೆ."

48. ಅಧಿವಿಚಾರಣಾ ನ್ಯಾಯಾಲಯವು ಮುಂದುವರೆದು 45 ನೇ ಯಾವುದೇ ಕಾಯಂ ನಿರ್ಮಿತಿಯನ್ನು ಸುಸ್ಥಾಪಿಸುವ ಅಥವಾ ಕಾಯಂ ಸ್ವರೂಪದ ಯಾವುದೇ ಕಾಮಗಾರಿಗಳನ್ನು ಕಾರ್ಯರೂಪಕ್ಕೆ ತರುವ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲವೆಂದು ಲೈಸೆನ್ಸ್ ಪಡೆದವರು ದೃಢೀಕರಿಸಿರುತ್ತೇನೆಂದು ಹಾಗೂ ಒಡಂಬಡಿಕೆ ಮಾಡಿಕೊಂಡಿರುತ್ತಾನೆಂದು ಸ್ಪಷ್ಟವಾಗಿ ಉಪಬಂಧಿಸಿರುತ್ತದೆಂಬ ನಿರ್ಣಯವನ್ನು ದಾಖಲಿಸಿರುತ್ತದೆ.ಆದ್ದರಿಂದ, ಈಗ ಅಪೀಲುದಾರನು ವಾಸ್ತವವಾಗಿ ಇದು ಭೋಗ್ಯವಾಗಿರುತ್ತದೆಯೇ ಹೊರತು ಪರವಾನಿಗೆಯಲ್ಲವೆಂದು ಹೇಳುವುದನ್ನು ನಿಲ್ಲಿಸಿರುತ್ತಾನೆ.ಸದರಿ ದಸ್ತಾವೇಜಿನಲ್ಲಿನ ಪ್ರಸ್ತುತ ಖಂಡವು ದಸ್ತಾವೇಜು ಗೇಣಿಯಾಗಿರುವುದಿಲ್ಲ ಹಾಗೂ ಪಕ್ಷಕಾರರ ನಡುವಿನ ಸಂಬಂಧವು ಲೈಸೆನ್ನು ಪಡೆದವನು ಹಾಗೂ ಲೈಸೆನ್ನು ನೀಡಿದವನಂತೆ ಇರುತ್ತದೆಯೇ ಹೊರತು ಭೂಮಾಲೀಕ ಹಾಗೂ ಗೇಣಿದಾರನಾಗಿರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿರುತ್ತದೆ.ಅಂತಿಮವಾಗಿ, ಅಧಿವಿಚಾರಣಾ ನ್ಯಾಯಾಲಯವು ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮ, 1882 ರ 9 (ಡಿ) ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿರುತ್ತದೆ.

IX ಸಮಾರೋಪ

49. ದಾಖಲೆ ಮೇಲಿರುವ ವಸ್ತುವಿಷಯವು, ಒಪ್ಪಿಕೊಂಡಂತೆ ಅಪೀಲುದಾರರು ಹಾಗೂ ಪ್ರತ್ಯರ್ಜಿದಾರರ ನಡುವಿನ ವ್ಯವಹರಣೆಯು ಪರವಾನಿಗೆಯ ಒಪ್ಪಂದದಡಿಯಲ್ಲಿ 2000 ರ ವರ್ಷದಲ್ಲಿ ಆರಂಭವಾಗಿರುತ್ತದೆಂಬುದನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ.ಇದನ್ನು ಕಾಲಕಾಲಕ್ಕೆ ನವೀಕರಿಸಲಾಗಿದ್ದು ಪರವಾನಿಗೆಯ ಕಳೆದ ಒಪ್ಪಂದವು 30.01.2015 ರಂದು ಪಕ್ಷಕಾರರ ನಡುವೆ ಮಾಡಿಕೊಂಡಿದ್ದು, ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮ 9 (ಡಿ) ಪ್ರಕರಣದಡಿಯಲ್ಲಿ ಅಪೀಲುದಾರನು ಅರ್ಜಿಯನ್ನು ಸಲ್ಲಿಸಿದ ಆಧಾರದ ಮೇಲೆ ಹಾಗೂ ಪಕ್ಷಕಾರರ ನಡುವೆ ಮಾಡಿಕೊಂಡ ದಸ್ತಾವೇಜನ್ನು ಸಂಪೂರ್ಣವಾಗಿ ಓದಿದ ಮೇಲೆ ಪಕ್ಷಕಾರರ ನಿಜವಾದ ಉದ್ದೇಶವು ಸ್ಪಷ್ಟವಾಗಿ ಕಂಡುಬಂದಿರುತ್ತದೆ.ಭಾರತೀಯ ಅಧಿಭೋಗಗಳ ಅಧಿನಿಯಮ, 1882 ರ 52 ನೇ ಪ್ರಕರಣದ ಉಪಬಂಧಗಳನ್ನು ಅನ್ವಯಿಸಿ ಒಪ್ಪಂದದ 4.2 ನೇ ಖಂಡದ ಹಿನ್ನಲೆಯಲ್ಲಿ, ಇದು ಪರವಾನಿಗೆಯ ದಸ್ತಾವೇಜಾಗಿರುತ್ತದೆಯೇ ಹೊರತು ಗೇಣಿಯಾಗಿರುವುದಿಲ್ಲ.ಆದ್ದರಿಂದ ಪಕ್ಷಕಾರರ ನಡುವೆ

ನಮೂದಾದ ಪರವಾನಿಗೆಯ ನಿಬಂಧನೆಗಳಲ್ಲಿ ಉದ್ದೇಶಿಸಲಾದಂಥ ಸಮಾಪ್ತಗೊಳಿಸಲಾದ ನೋಟೀಸನ್ನು ಹೊರಡಿಸಿ, ಅಧಿವಿಚಾರಣಾ ನ್ಯಾಯಾಲಯವು ದಾಖಲೆ ಮೇಲಿನ ಇಡೀ ವಿಷಯವನ್ನು ಪರಿಗಣಿಸಿ, ಪಕ್ಷಕಾರರ ನಡುವಿನ ವ್ಯವಹರಣೆಯು ಭಾರತೀಯ ಅಧಿಭೋಗಗಳ ಅಧಿನಿಯಮ, 1882 ರ 52 ನೇ ಪ್ರಕರಣದಡಿಯಲ್ಲಿ ಉದ್ದೇಶಿಸಿದಂಥ ಪರವಾನಿಗೆಯಾಗಿದ್ದು, ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆಂದು ನಿರ್ದಿಷ್ಟ ನಿರ್ಣಯವನ್ನು ಯುಕ್ತವಾಗಿಯೇ ದಾಖಲಿಸಿರುತ್ತದೆ.

50. ಮೇಲೆ ಹೇಳಿದ ಕಾರಣಗಳಿಗೆ ಸಂಬಂಧಿಸಿದಂತೆ, ಪ್ರಸ್ತುತ ಅಪೀಲಿನಲ್ಲಿ ಪ್ರಸ್ತಾಪಿಸಿದ 2 ನೇ ಅಂಶವನ್ನು, ಅಧಿವಿಚಾರಣಾ ನ್ಯಾಯಾಲಯವು ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮ, 1882 ರ 9 (ಡಿ) ಪ್ರಕರಣದ ಉಪಬಂಧಗಳಡಿಯಲ್ಲಿ ಅಪೀಲುದಾರರು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿರುವುದು ಸಮರ್ಥನೀಯವಾಗಿರುತ್ತದೆಂದು ಸಕಾರಾತ್ಮಕವಾಗಿ ಅಭಿಪ್ರಾಯವನ್ನು ಎತ್ತಿಹಿಡಿಯಬೇಕಾಗಿರುತ್ತದೆ.ಅಧಿವಿಚಾರಣಾ ನ್ಯಾಯಾಲಯವು ನಿಗದಿಪಡಿಸಿರುವ ಕಾರಣಗಳು ಹಾಗೂ ತಳೆದ ನಿರ್ಣಯಗಳು ದಾಖಲೆಯಲ್ಲಿ ಲಭ್ಯವಿರುವ ನಿರ್ಣಾಯಕ ದಸ್ತಾವೇಜುಗಳನ್ನು ಆಧರಿಸಿರುತ್ತವೆ.ಇದ್ದು ಕಾನೂನಿಗನುಸಾರವಾಗಿರುತ್ತದೆ.ಅಪೀಲುದಾರನಿಗೆ, ಮಧ್ಯಸ್ಥಿಕೆ ಹಾಗೂ ಸಂಧಾನ ಅಧಿನಿಯಮ, 1996 ರ 37 ( 1) ನೇ ಪ್ರಕರಣದ ಉಪಬಂಧಗಳಡಿ ಈ ನ್ಯಾಯಾಲಯದ ಅಪೀಲು ಅಧಿಕಾರವ್ಯಾಪ್ತಿಯನ್ನು ಚಲಾಯಿಸಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶದ ಮಧ್ಯಪ್ರವೇಶಿಸಲು ಯಾವುದೇ ಆಧಾರವಿರುವುದಿಲ್ಲ.ತದನುಸಾರವಾಗಿ ಅಪೀಲನ್ನು ವಜಾಗೊಳಿಸಿದೆ.

51. ಪ್ರಸ್ತುತ ಪ್ರಕರಣದ ವಿಲಕ್ಷಣವಾದ ವಾಸ್ತವಾಂಶಗಳು ಹಾಗೂ ಸಂದರ್ಭಗಳ ಹಿನ್ನಲೆಯಲ್ಲಿ, ಪಕ್ಷಕಾರರ ನಡುವೆ ಮಾಡಿಕೊಂಡಿರುವ ಪರವಾನಿಗೆಯ ಒಪ್ಪಂದದ ದಿನಾಂಕದಲ್ಲಿದ್ದಂತೆ ಅದು ಅಸ್ತಿತ್ವದಲ್ಲಿರುವುದರಿಂದ ಪ್ರತ್ಯರ್ಜಿದಾರರಿಗೆ ದಾವಾ ಅನುಸೂಚಿತ ಸ್ವತ್ತಿನಿಂದ ನಿರ್ಗಮಿಸಲು ತೆರವುಗೊಳಿಸಲು ಹಾಗೂ ರಿಕ್ತ ಸ್ವಾಧೀನವನ್ನು 0 ಹಸ್ತಾಂತರಿಸಲು ಇಂದಿನಿಂದ ಎರಡು ತಿಂಗಳುಗಳ ಸಮಯವನ್ನು ಅಪೀಲುದಾರನಿಗೆ ನೀಡಲಾಗಿರುತ್ತದೆ.

ತದನುಸಾರವಾಗಿ ಆದೇಶಿಸಲಾಗಿರುತ್ತದೆ.